# ಯುವ ಮಾರ್ಗ

YUVA MARGA KANNADA DAILY NEWS PAPER ಕನ್ನಡ ದಿನಪತ್ರಿಕೆ

ಸಂಪಾದಕರು: ಅನಿಲ್ ಕುಮಾರ್ ಹೆಚ್

EDITOR :ANIL KUMAR H

E-MAIL : yuvamarga@gmail.com

cell no: 9916218889

ಸಂಪುಟ : 04 Volume : 04 | ಸಂಚಿಕೆ : 01 Issue : 01 | ರಾಯಚೂರು RAICHUR | ಬುಧವಾರ WEDNESDAY 09-10-2024 | TITLE-CODE:-KARKAN 27434 | ಪುಟ : 04 Page : 04 | ಬೆಲೆ : ರೂ: 2-00 PRICE: RS: 2- 00


# ನವಲಿ ಅಣೆಕಟ್ಟು, ತಿಂಗಳೊಳಗೆ ಮೂರು ರಾಜ್ಯಗಳ ಸಿಎಂ ಜತೆ ಚರ್ಚೆ : ಡಿಸಿಎಂ ಡಿ.ಕೆ.ಶಿವಕುಮಾರ್



**ರಾಯಚೂರು :** ಶಿವಮೊಗ್ಗ ಜಿಲ್ಲೆ ಬಳಿಯ ನವಲಿ ಎಂಬಲ್ಲಿ ಅಣೆಕಟ್ಟು ನಿರ್ಮಾಣ ಸಂಬಂಧ ಒಂದು ತಿಂಗಳ ಒಳಗಾಗಿ ಕರ್ನಾಟಕ, ಆಂಧ್ರ ಹಾಗೂ ತೆಲಂಗಾಣದ ಮುಖ್ಯಮಂತ್ರಿಗಳ ಜತೆ ಚರ್ಚೆ ಮಾಡಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಮಂಗಳವಾರ ಜಿಲ್ಲೆಯ ಸಿಂಧನೂರಿನಲ್ಲಿ ಆಯೋಜಿಸಿದ್ದ ರೈತ ದಸರಾ ಉದ್ಘಾಟಿಸಿ ಮಾತನಾಡಿದ ಅವರು, ತುಂಗಾಭದ್ರ ಅಣೆಕಟ್ಟೆಗೆ ಪರ್ಯಾಯವಾಗಿ ನವಲಿಯಲ್ಲಿ ಅಣೆಕಟ್ಟು ನಿರ್ಮಿಸಬೇಕೆಂದು ಒತ್ತಾಯವಿದೆ. ಅಲ್ಲದೆ, 33 ಟಿಎಂಸಿ ನೀರು ವ್ಯರ್ಥವಾಗುತ್ತಿವೆ ಎಂದು ಮಾಹಿತಿ ನೀಡಿದ್ದಾರೆ. ಹೀಗಾಗಿ ಈ ಯೋಜನೆ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

**ಗೇಟ್ ಬದಲಿಗೆ ಕ್ರಮ:** ತಜ್ಞರ ಸಮಿತಿಯು ಅಣೆಕಟ್ಟಿನ ಗೇಟ್ಗಳ ಬದಲಾವಣೆ ಮಾಡಬೇಕೆಂದು ವರದಿ ನೀಡಿದೆ. ಈ ಬಗ್ಗೆ ಸಿಎಂ, ಜಿಲ್ಲಾ ಮಂತ್ರಿಗಳು, ಸಂಸದರು, ಶಾಸಕರ ಜತೆ ಚರ್ಚೆ ಮಾಡಿದ್ದು, ಮುಂದಿನ ದಿನಗಳಲ್ಲಿ ಈ ಎಲ್ಲ ಗೇಟ್ಗಳನ್ನು ಪರಿಶೀಲನೆ ಮಾಡಿ, ಅಣೆಕಟ್ಟಿನಲ್ಲಿ ನೀರಿನ ಪ್ರಮಾಣ ಕಡಿಮೆಯಾದ ಬಳಿಕ ಗೇಟ್ಗಳನ್ನು ಬದಲಾವಣೆ ಮಾಡುತ್ತೇವೆ. ಆ ಮೂಲಕ ಈ ಅಣೆಕಟ್ಟು, ರೈತರ ಬದುಕು ಉಳಿಸಲು ಸರಕಾರ ಕ್ರಮ ವಹಿಸಲಿದೆ ಎಂದರು.

**ಜಾತಿಗಣತಿ' ಪಕ್ಷದ ನಿರ್ಧಾರಕ್ಕೆ ಬದ್ಧ:** ಸಾಮಾಜಿಕ, ಆರ್ಥಿಕ ಸಮೀಕ್ಷಾ ವರದಿ (ಜಾತಿಗಣತಿ) ವಿಚಾರ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದ ನಿರ್ಧಾರಕ್ಕೆ ನಾವೆಲ್ಲರೂ ಬದ್ಧರಾಗಿರುತ್ತೇವೆ. ಈ ವಿಚಾರದಲ್ಲಿ ನಮ್ಮ ಪಕ್ಷ ಏನು ಹೇಳುತ್ತದೆಯೋ ಅದನ್ನೇ ನಾವು ಮಾಡುತ್ತೇವೆ'

**ಜನರ ತೀರ್ಪನ್ನು ಸ್ವಾಗತಿಸುತ್ತೇವೆ:** ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರು ನೀಡಿರುವ ತೀರ್ಪನ್ನು ಸ್ವಾಗತಿಸುತ್ತೇವೆ. ಈ ತೀರ್ಪು ನಮಗೆ ದೊಡ್ಡಪಾಠವಾ ಗಿದ್ದು, ಮುಂದೆ ಎಚ್ಚರಿಕೆಯಿಂದ ಹೆಜ್ಜೆ ಇಡಬೇಕು. ಪಕ್ಷ ಎಲ್ಲಿ ಎಡವಿದೆ ಎನ್ನುವುದನ್ನು ನಮ್ಮ ನಾಯಕರು ಪರಿಶೀಲಿಸಲಿದ್ದಾರೆ. ಮತದಾರ ತೀರ್ಪನ್ನು ಎಲ್ಲರೂ ಗೌರವಿಸಬೇಕು. ನಾವು ಚುನಾವಣೋತ್ತರ ಸಮೀಕ್ಷೆ ಯನ್ನು ನಂಬಿರಲಿಲ್ಲ. ಆದರೆ ಜನ ನಮಗೆ ಬಹುಮತ ನೀಡುತ್ತಾರೆಂಬ ನಿರೀಕ್ಷೆ ಇತ್ತು. ಜಮ್ಮು-ಕಾಶ್ಮೀರದಲ್ಲಿ ಇಂಡಿಯಾ ಮೈತ್ರಿಕೂಟಕ್ಕೆ ಬಹು ಮತ ಬರಲಿದೆ ಎಂಬ ವಿಶ್ವಾಸವಿತ್ತು. ಅದರಂತೆ ಬಂದಿದೆ'

**-ಡಿ.ಕೆ.ಶಿವಕುಮಾರ್**
**ಉಪಮುಖ್ಯಮಂತ್ರಿ**

# ಹರಿಯಾಣದಲ್ಲಿ ಬಿಜೆಪಿ ಹ್ಯಾಟ್ರಿಕ್, ಜಮ್ಮು- ಕಾಶ್ಮೀರದಲ್ಲಿ ಕೈ ಮೈತ್ರಿಗೆ ಪವರ್

**ಹೈದ್ರಾಬಾದ್:** 'ಚುನಾವಣಾ ಫಲಿತಾಂಶದ ದಿಕ್ಸೂಚಿ' ಎಂದು ಪರಿಗಣಿಸಲಾಗುವ ಚುನಾವಣೋತ್ತರ ಸಮೀಕ್ಷೆಗಳು ಮತ್ತೆ ಸುಳ್ಳಾಗಿವೆ. ಲೋಕಸಭೆ ಚುನಾವಣೆಯಂತೆಯೇ ಹರಿಯಾಣ ಮತ್ತು ಜಮ್ಮು- ಕಾಶ್ಮೀರ ವಿಧಾನಸಭೆ ಚುನಾವಣೆಯಲ್ಲಿ ಮತದಾರರ ನಾಡಿಮಿಡಿತವನ್ನು ನಿಖರವಾಗಿ ಹಿಡಿಯುವಲ್ಲಿ ವಿಫಲವಾಗಿದ್ದು, ಮತಗಟ್ಟೆ ಸಮೀಕ್ಷೆಗಳ ಲೆಕ್ಕಾಚಾರ ಬುಡಮೇಲಾಗಿವೆ.

ಹರಿಯಾಣದಲ್ಲಿ ಬಿಜೆಪಿಯನ್ನು ಸೋಲಿಸಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ, ಜಮ್ಮು- ಕಾಶ್ಮೀರದಲ್ಲಿ ಅತಂತ್ರ ಫಲಿತಾಂಶ ಬರಲಿದೆ ಎಂದು ಹಲವು ಸಮೀಕ್ಷೆಗಳು ಭವಿಷ್ಯ ನುಡಿದಿದ್ದವು. ಈಗ ಎಲ್ಲವೂ ಸುಳ್ಳಾಗಿವೆ. ಪ್ರಕಟವಾಗುತ್ತಿರುವ ಫಲಿತಾಂಶದ ಪ್ರಕಾರ, ಹರಿಯಾಣದಲ್ಲಿ ಬಿಜೆಪಿ ಸತತ ಮೂರನೇ

2ನೇ ಪುಟಕ್ಕೆ

## ಹರ್ಯಾಣ ಫಲಿತಾಂಶವನ್ನು ಒಪ್ಪಿಕೊಳ್ಳವುದಿಲ್ಲ ; ಮತಯಂತ್ರಗಳು, ಪ್ರಕ್ರಿಯೆಯನ್ನು ತಿರುಚಲಾಗಿದೆ : ಕಾಂಗ್ರೆಸ್

**ಹೊಸದಿಲ್ಲಿ :** ಹರ್ಯಾಣ ವಿಧಾನಸಭಾ ಚುನಾವಣೆಯಲ್ಲಿ ಬಳಸಲಾಗಿರುವ ಇಲೆಕ್ಟ್ರಾನಿಕ್ ಮತಯಂತ್ರಗಳನ್ನು ತಿರುಚಲಾಗಿದೆ ಎಂದು ಮಂಗಳವಾರ ಆರೋಪಿಸಿರುವ ಕಾಂಗ್ರೆಸ್ ಪಕ್ಷವು, ಈ ಚುನಾವಣಾ ಫಲಿತಾಂಶವನ್ನು ತಾನು ಒಪ್ಪಿಕೊಳ್ಳುವುದಿಲ್ಲ ಎಂದು



2ನೇ ಪುಟಕ್ಕೆ

## ಹರ್ಯಾಣದಲ್ಲಿ ಮೊದಲ ಬಾರಿಗೆ ಪಕ್ಷವೊಂದು 3ನೇ ಬಾರಿಗೆ ಅಧಿಕಾರಕ್ಕೇರಿದೆ' : ಪ್ರಧಾನಿ ಮೋದಿ



**ನವದೆಹಲಿ:** ಬಿಜೆಪಿಗೆ ಇದು ಐತಿಹಾಸಿಕ ಗೆಲುವಾಗಿದ್ದು, ಹರ್ಯಾಣದಲ್ಲಿ ಮೊದಲ ಬಾರಿಗೆ ಪಕ್ಷವೊಂದು 3ನೇ ಬಾರಿಗೆ ಅಧಿಕಾರಕ್ಕೇರಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಎಲ್ಲ ಚುನಾವಣೋತ್ತರ ಸಮೀಕ್ಷೆಗಳ ವರದಿ ಉಲ್ಟಾಹೊಡೆಯುವಂತೆ ಹರ್ಯಾಣದಲ್ಲಿ ಚುನಾವಣಾ ಫಲಿತಾಂಶ ಬಂದಿದ್ದು, ಮೊದಲ ಬಾರಿಗೆ ಪಕ್ಷವೊಂದು 3ನೇ ಬಾರಿಗೆ ಅಧಿಕಾರಕ್ಕೇರಿದೆ.

ಇದೇ ಖುಷಿಯಲ್ಲಿ ಬಿಜೆಪಿ ನಾಯಕರು ದೆಹಲಿಯ ಬಿಜೆಪಿ ಕೇಂದ್ರ ಕಚೇರಿಯಲ್ಲಿ ಸಂಭ್ರಮಾಚರಣೆ ಮಾಡಿದ್ದು, ಈ ಸಂಭ್ರಮಾಚರಣೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವ ಅಮಿತ್ ಶಾ ಸೇರಿದಂತೆ ಇತರೆ ನಾಯಕರು ಪಾಲ್ಗೊಂಡಿದ್ದರು.

2ನೇ ಪುಟಕ್ಕೆ

# ಕುರ್ಡಿ ಅಂಗನವಾಡಿ ಇಲ್ಲದೇ ಆಹಾರ ಪೂರೈಕೆ ಹೆಸರಿನಲ್ಲಿ ಅಕ್ರಮ: ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಮನವಿ

**ರಾಯಚೂರು. ಅ.8 –** ಮಾನ್ವಿ ತಾಲೂಕಿನ ಕುರ್ಡಿ ಗ್ರಾಮದ 13ನೇ ಅಂಗನವಾಡಿ ಕೇಂದ್ರ ಮಂಜೂರಾಗಿದ್ದು, ಅಂಗನವಾಡಿ ಕಾರ್ಯಕರ್ತೆಯನ್ನು ನೇಮಕ ಮಾಡದೆ, 7–8 ತಿಂಗಳ ಆಹಾರ ಪದಾರ್ಥಗಳನ್ನು ದುರ್ಬಳಕೆ ಮಾಡಿಕೊಂಡಿರುವ ಮಾನ್ವಿ ಸಿಡಿಪಿಓ ಮತ್ತು ಸೂಪರ ವೈಜರ್ ಇವರಿಬ್ಬರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಂಡು ಸೇವೆಯಿಂದ ಅಮಾನತ್ ಗೊಳಿಸಬೇಕು ಎಂದು ದಲಿತ ಸೇನೆ (ಜಿಲ್ಲಾ ಸಮಿತಿ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಅಧಿಕಾರಿಗೆ ಮನವಿ ಸಲ್ಲಿಸಿದರು.

ಕುರ್ಡಿ ಗ್ರಾಮದ 13ನೇ ಅಂಗನವಾಡಿ ಕೇಂದ್ರ ಮಂಜೂರಾಗಿದ್ದು, ಈ ಅಂಗನವಾಡಿ ಕೇಂದ್ರಕ್ಕೆ ಅಂಗನವಾಡಿ ಕಾರ್ಯಕರ್ತೆಯನ್ನು ಮಾನ್ವಿ ಸಿ.ಡಿ.ಪಿ.ಓ. ರವರು ನೇಮಕ ಮಾಡದೆ ಅನಧಿಕೃತವಾಗಿ ಅಂಗನವಾಡಿ ಕೇಂದ್ರ ಯಾವ ಸ್ಥಳದಲ್ಲಿ ಪ್ರಾರಂಭ ಮಾಡಿರುತ್ತಾರೆಂಬುದು ತಿಳಿದಿಲ್ಲ.

ಆದರೆ ಸುಮಾರು 7–8 ತಿಂಗಳ ಆಹಾರ ಪದಾರ್ಥಗಳನ್ನು ಅಂಗನವಾಡಿ ಕೇಂದ್ರಕ್ಕೆ ಸರಬರಾಜು ಮಾಡಿ ಆಹಾರ ಪದಾರ್ಥಗಳನ್ನು ದುರ್ಬಳಕೆ ಮಾಡಿಕೊಂಡ ಮಾನ್ವಿ ಸಿ.ಡಿ.ಪಿ.ಓ. ಮತ್ತು ಸೂಪರ ವೈಜರ್ ರವರು ವಿರುದ್ಧ ಕ್ರಮಕ್ಕೆ ಆಗ್ರಹಿಸಿದರು.

ಅಂಗನವಾಡಿ ಕೇಂದ್ರ ಯಾವ ಆಧಾರದ ಮೇಲೆ ಪ್ರಾರಂಭ ಮಾಡಿರುವದು ತಿಳಿಯುತ್ತಿಲ್ಲ, 7–8 ತಿಂಗಳ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಿಕೊಂಡು ಈಗ ಹೊಸದಾಗಿ ಈ ಅಂಗನ ವಾಡಿ ಕೇಂದ್ರಕ್ಕೆ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಅರ್ಜಿ ಕರೆದಿರುವದು ತಿಳಿದು ಬಂದಿದೆ.

ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡುವದನ್ನು ರದ್ದುಗೊಳಿಸಿ 7–8 ತಿಂಗಳ 13 ನೇ ಅಂಗನವಾಡಿ ಕೇಂದ್ರಕ್ಕೆ ಬಂದಿರುವ ಆಹಾರ ಪದಾರ್ಥಗಳು ದುರ್ಬಳಕೆ ಮಾಡಿಕೊಂಡಿರು ವದನ್ನು ತನಿಖೆ ಕೈಗೊಂಡು ಬೇಜವಾಬ್ದಾರಿ ಅಧಿಕಾರಿ ಸಿ.ಡಿ.ಪಿ.ಓ ರವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಂಡು ಸೇವೆಯಿಂದ ಅಮಾನತ್ಗೊಳಿಸಬೇಕು, ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ನೇಮಕ ಮಾಡಿಕೊಳ್ಳ ಬಾರದೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಅಧ್ಯಕ್ಷ ಮಾರುತಿ ಚಿಕ್ಕಸುಗೂರು, ಕಾರ್ಯದರ್ಶಿ ಜೆ.ಮಧುಕಾಂತ

ಬಿ. ಭೀಮೇಶ ಕುರ್ಡಿ, ಕೃಷ್ಣ ಮಾಚರ್ಲಾ, ಭಿಮಣ್ಣ ಮಂಚಾಲ ಇದ್ದರು.

# ಮುನ್ನೂರುಕಾಪು ಸಮಾಜ : ನವರಾತ್ರಿಯ ಆರನೇ ದಿನದ ಸಾಂಸ್ಕೃತಿಕ ವೈಭವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಮುನ್ನೂರುಕಾಪು ಸಮಾಜ ರೂವಾರಿ- ಶ್ರೀಧರ ರೆಡ್ಡಿ




**ರಾಯಚೂರು. ಅ.8 –** ಮುಂಗಾರು ನಂತರ ನವರಾತ್ರಿ ಹಬ್ಬದ ಹರಿದಿನಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅತ್ಯಂತ ವೈಭವಕರಣದಿಂದ ಆಯೋಜನೆ ಮಾಡುವ ಮೂಲಕ ಮುನ್ನೂರು ಕಾಪು ಸಮಾಜ ಸಾಂಸ್ಕೃತಿಕ ಮುಂಚೂಣಿತ್ವವನ್ನು ವಹಿಸಿಕೊಳ್ಳುತ್ತಿದೆ ಎಂದು ಬಾಲಂಕು ಆಸ್ಪತ್ರೆ ಡಾ.ಶ್ರೀಧರ್ ರೆಡ್ಡಿ ಹೇಳಿದರು.

ಅವರಿಂದು ನಗರದ ಗಾದ್ವಲ್ ರಸ್ತೆಯ ಮುನ್ನೂರುಕಾಪು ಸಮಾಜ ಮಾತಾ ಲಕ್ಷ್ಮಮ್ಮ ದೇವಿ ಹಾಗೂ ಕಾಳಿಕಾದೇವಿ ದೇವಸ್ಥಾನದಲ್ಲಿ ಆಯೋಜಿಸಿದ ಆರನೇ ದಿನದ ನವರಾತ್ರಿ ಉತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ, ಗ್ರಾಮೀಣ ಕ್ರೀಡೆ ಜಾನಪದ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜನೆ ಮಾಡುವ ಮೂಲಕ ಮುನ್ನೂರುಕಾಪು ಸಮಾಜ ಮಾದರಿಯಾಗಿದೆ ಎಂದು ಶ್ಲಾಘನೀಯ ವ್ಯಕ್ತಪಡಿಸಿದರು.

ಪ್ರಸ್ತುತ ದಿನಗಳಲ್ಲಿ ಜನರು ಟಿವಿ, ಸಿನಿಮಾ, ಸಾಮಾಜಿಕ ಜಾಲತಾಣಗಳ ಹಾವಳಿಯಿಂದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಕುಂದುಂಟಾಗುತ್ತಿದೆ. ಪ್ರತಿಭಾವಂತರಿಗೆ ವೇದಿಕೆ ಸಿಗುತ್ತಿಲ್ಲ. ಮುನ್ನೂರುಕಾಪು ಸಮಾಜ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಿದೆ ಎಂದು ತಿಳಿಸಿದರು.

ಮುನ್ನೂರುಕಾಪು ಸಮಾಜ ಲಕ್ಷಾಂತರ ರೂ.ವೆಚ್ಚಮಾಡಿ ಕಾರ್ಯಕ್ರಮಗಳನ್ನು ನಿರ್ವಹಿಸಿ ಕಲೆ ಸಾಹಿತ್ಯಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದೆ. ಮುನ್ನೂರುಕಾಪು ಸಮಾಜ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಮುಂಚೂಣಿಯಲ್ಲಿ ಅಭಿವೃದ್ಧಿ ಹೊಂದಿದೆ. ಶ್ರೀ ಲಕ್ಷ್ಮಮ್ಮದೇವಿ ಕಾಳಿಕಾದೇವಿ ಆಶೀರ್ವಾದ, ಶ್ರೀ ಕೃಷ್ಣದೇವರಾಯರಂತ ಮಹಾನ್ ವ್ಯಕ್ತಿಗಳು ಈ ಸಮಾಜದಲ್ಲಿ ಜನಿಸಿದ ಕೃಪೆಯಿಂದ ಉನ್ನತ ಸ್ಥಾನಕ್ಕೆ ಬೆಳೆಯಲು ಸಾಧ್ಯವಾಗಿದೆ. ಸಾಹಿತ್ಯ, ನೃತ್ಯಕ್ಕೆ ಹೆಚ್ಚಿನ ಆದ್ಯತೆ ನೀಡಿವ ಮೂಲಕ ಮುನ್ನೂರು ಕಾಪು ಸಮಾಜದ ನವರಾತ್ರಿ ಕಾರ್ಯಕ್ರಮ ನಿರ್ವಹಿಸುತ್ತಿರುವುದು ಈ ಭಾಗಕ್ಕೆ ಹೆಚ್ಚಿನ ಮೆರಗು ತರುತ್ತಿದೆ ಜನ ಮನದಲ್ಲಿ ಉಳಿಯುವಂತೆ ಅದ್ದೂರಿಯಾಗಿ ಆಚರಣೆ ಮಾಡುತ್ತಿ ಈ ಕಾರ್ಯಕ್ರಮದ ದಿವ್ಯಾ ಸನ್ನಿದ್ಯಾವನ್ನು ವಹಿಸಿದ ಸುದ್ದಿಮೂಲ ಸಂಪಾದಕರಾದ ಬಸವರಾಜ ಸ್ವಾಮಿ ಅವರು ಮಾತನಾಡಿ, ಎ. ಪಾಪಾರೆಡ್ಡಿ ಎಂದೆಂದಿಗೂ ಜಿಲ್ಲೆಯ ಐಕಾನ್ ಲೆಜೆಂಡ್, ಮುನ್ನೂರು ಕಾಪು ಸಮಾಜದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ಜೆಡಿಎಸ್ ಮುಖಂಡ ಮಹಾಂತೇಶ್ ಪಾಟೀಲ್ ಮಾತನಾಡಿ, ಕಳೆದ 25 ವರ್ಷ ಗಳಲ್ಲಿ ಜಿಲ್ಲೆಯಲ್ಲಿ ಅನೇಕ ಬದಲಾವಣೆ ಕಂಡು ಬಂದಿದ್ದು ಅದರಲ್ಲಿ ಪ್ರಮುಖವಾಗಿ ಮುನ್ನೂರು ಕಾಪು ಸಮಾಜ ಕಾರಹುಣ್ಣಿಮೆ ಅಂಗವಾಗಿ ಆಯೋಜಿಸುವ ಗ್ರಾಮೀಣ ಕ್ರೀಡೆಗಳ ಮೂಲಕ ಮುಂಗಾರು ನಂತರ ನವರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮ ಅತ್ಯಂತ ವೈಭವಕರಣದಿಂದ ಆಚರಣೆ ಮಾಡುತ್ತಿದೆ. ಮುನ್ನೂರು ಕಾಪು ಸಮಾಜ ಪ್ರೇರಣೆಯಿಂದ ಪ್ರತಿಯೊಬ್ಬ ರೈತರು ಎತ್ತುಗಳನ್ನು ಸಾಕುವಂತೆ ಮಾಡಿದೆ. ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಮುನ್ನೂರು ಕಾಪು ಸಮಾಜದ ಹಿರಿಯ ಮುಖಂಡ ಶಾಸಕ ಎ. ಪಾಪಾರೆಡ್ಡಿ ಅವರು ಕಲಾವಿದರ ಬೆಳೆಸುವಲ್ಲಿ ಮುಂಚೂಣಿತ್ವ ವಹಿಸಿ

2ನೇ ಪುಟಕ್ಕೆ

# ಭೂಮಿ ಖರೀದಿ, ಮಾರಾಟಕ್ಕೆ ಅನಗತ್ಯ ಸಮಸ್ಯೆ : ಭೂ ಸ್ವಾಧೀನ ಕಾಯ್ದೆ ತಿದ್ದುಪಡಿಗೊಳಿಸಲಿ- ಜಗದೀಶ




**ರಾಯಚೂರು. ಅ.8 –** ಭೂ ಕಂದಾಯ ಅಧಿನಿಯಮ 1964 ರಲ್ಲಿರುವ ಭಾಗ 11 ಹಕ್ಕುಗಳ ಅಸ್ತಿ ಬದಲಾವಣೆಗೆ ಅನಗತ್ಯ ವಿಳಂಬ ವಾಗುತ್ತಿದ್ದು ಅನಗತ್ಯ ವಿಳಂಬ ದೂರ ಮಾಡಲು ಕಾನೂನು ತಿದ್ದುಪಡಿ ಕಂದಾಯ ಇಲಾಖೆ ಮುಂದಾಗಬೇಕೆಂದು ಸೇಠ್ ಚುನ್ನಿಲಾಲ್ ಅಮರಚಂದ್ ಬೊಹರಾ ಕಾನೂನು ಮಹಾವಿದ್ಯಾಲಯದ ಹಳೆ ವಿದ್ಯಾ ರ್ಥಿಗಳ ಸಂಘದ ಆಧ್ಯಕ್ಷ ಜಗದೀಶ ಆಗ್ರಹಿಸಿದರು.

ಅವರಿಂದು ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿ ರೈತರು, ಕೃಷಿಕರಿಗೆ ಆಸ್ತಿ ನೊಂದಣಿ, ಸರ್ವೆ, ದಾರಿ ಸಮಸ್ಯೆ, ಆಸ್ತಿ ವರ್ಗಾವಣೆ ಸಮಸ್ಯೆ ನೀಗಿಸಲೇಂದೆ ಭೂ ಕಂದಾ ಯ ರೂಪಿಸಲಾಗಿದೆ. ಅಧಿನಿಯಮ 11ರ ವಿಭಾಗದಲ್ಲಿ 27 ರಿಂದ 136 ಕಲಂಗಳ ಸಹ ಅಳವಡಿಸಲಾಗಿದೆ.ಭೂಮಿ ಮಾರಾಟ ಮತ್ತು ಖರೀಧಿ ಪ್ರಕ್ರಿಯೆ ನಡೆದಾಗ ಗ್ರಾಮ ಲೆಕ್ಕಾಧಿಕಾರಿಗಳು, ಕಂದಾಯ ನಿರೀಕ್ಷಕರು ಅನಗತ್ಯ ಆಕ್ಷೇಪಣೆಗಳು ಸೃಷ್ಟಿಸಿ ಒಂದು ವಾರದಲ್ಲಿ ಆಗಬೇಕಿರುವ ನೊಂದಣಿ ಪ್ರಕ್ರಿಯೆ ವಿಚಾರಣೆ ಹೆಸರಿನಲ್ಲಿ ಆರು ದಿಂದ ವರ್ಷ ಕಾಲ ಹರಣವಾಗಲು ಕಾರಣವಾಗಿದೆ. ಮುಟ್ಯೇಷನ್ ತಕರಾರರುಗಳನ್ನು ನಾಡ ತಹಸೀಲ್ದಾರರು ವಿಚಾರಣೆ ನಡೆಸಿದರೂ ರಾಜಕೀಯ ಪ್ರಭಾವ ಮತ್ತು ಹಣ ಆಮಿಷೆಗೆ ಒಳಗಾಗಿ ವ್ಯತಿರಿಕ್ತ ಆದೇಶ ನೀಡುತ್ತಿದ್ದಾರೆ. ರೈತರಿಗೆ ಅನಗತ್ಯ ಸಮಸ್ಯೆಗಳು ಸೃಷ್ಟಿಯಾಗುತ್ತಲಿವೆ. ಕಂದಾಯ ಅಧಿನಿಯಮ 11 ಭಾಗದಲ್ಲಿ ಕಲಂ 135 ಅನ್ವಯ ನ್ಯಾಯಾಲಯಗಳಿಗೆ ಮಧ್ಯಪ್ರವೇಶಿಸಲು ಅವಕಾಶವಿಲ್ಲ. ನ್ಯಾಯಾಲಯಕ್ಕೆ ಹೋಗುವ ಅವಕಾಶ ಇಲ್ಲದೇ ಇರುವದನ್ನು ಬಳಸಿಕೊಂಡು ಮನಸೋಯಿಚ್ಚೆ ಆದೇಶಗಳನ್ನು ಹೊರಡಿಸಲಾಗುತ್ತಿದೆ. ಕಾರಣ ಸರ್ಕಾರ ಕಂದಾಯ ಇಲಾಖೆ ಅಧಿನಿಯಮಕ್ಕೆ ತಿದ್ದುಪಡಿ ತಂದು ಜೆಎಂಎಫ್ಸಿ

2ನೇ ಪುಟಕ್ಕೆ

# ಕ್ವಿನ್ ಸಿಟಿ ಯೋಜನೆಯಲ್ಲಿ ಅಮೆರಿಕದ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳ ಆಸಕ್ತಿ : ಎಂ.ಬಿ.ಪಾಟೀಲ್

**ಬೆಂಗಳೂರು :** ರಾಜ್ಯ ಸರಕಾರವು ಇತ್ತೀಚೆಗೆ ಆರಂಭಿಸಿರುವ ಮಹತ್ವಾಕಾಂಕ್ಷಿ ಮತ್ತು ದೂರದೃಷ್ಟಿಯ ಜ್ಞಾನ, ಆರೋಗ್ಯ ಮತ್ತು ನಾವೀನ್ಯತೆಯ ಅತ್ಯಾಧುನಿಕ ನಗರ (ಕ್ವಿನ್ ಸಿಟಿ) ಯೋಜನೆಯಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಅಮೆರಿಕದ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳು ತೀವ್ರ ಆಸಕ್ತಿ ತೋರಿಸಿವೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.



ಮುಂದಿನ ವರ್ಷ ಬೆಂಗಳೂರಿನಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಹೂಡಿಕೆದಾರರನ್ನು ಆಕರ್ಷಿಸಲು ಅಮೆರಿಕದ ಅಧಿಕೃತ ಪ್ರವಾಸದಲ್ಲಿ ಇರುವ ಅವರು, ಜಾನ್ಸ್ ಹಾಪ್ಕಿನ್ಸ್ ಯುನಿವರ್ಸಿಟಿ, ಕೆರ್ ಬಿಸಿನೆಸ್ ಸ್ಕೂಲ್ ಮತ್ತು ಬ್ಲೂಮ್ಬರ್ಗ್ ಸ್ಕೂಲ್ ಆಫ್ ಪಬ್ಲಿಕ್ ಹೆಲ್ತ್ ಆ್ಯಂಡ್ ಸ್ಕೂಲ್ ಆಫ್ ಮೆಡಿಸಿನ್ ನ ಉನ್ನತ ಅಧಿಕಾರಿಗಳ ಜೊತೆಗೆ ಮಾತುಕತೆ ನಡೆಸಿದ್ದಾರೆ.

ಕರ್ನಾಟಕ ಸರಕಾರ ಮತ್ತು ರಾಜ್ಯದ ಶೈಕ್ಷಣಿಕ ಸಂಸ್ಥೆಗಳ ಜೊತೆಗಿನ ಪಾಲುದಾರಿಕೆ ಸಾಧ್ಯತೆಗಳನ್ನು ಈ ಸಭೆಗಳಲ್ಲಿ ಪ್ರಮುಖವಾಗಿ ಚರ್ಚಿಸಲಾಗಿದೆ. ಜಿಇ ಹೆಲ್ತ್ ಕೇರ್, ಎಲ್ 3 ಹ್ಯಾರಿಸ್ ಟೆಕ್ನಾಲಜೀಸ್ನ ಉನ್ನತ ಪ್ರತಿನಿಧಿಗಳ ಜೊತೆಗೆ ನಡೆದ ಮಾತುಕತೆಗಳೂ ಆಶಾದಾಯಕ ವಾಗಿವೆ ಎಂದು ಅವರು ಹೇಳಿದ್ದಾರೆ.

ಜಾನ್ಸ್ ಹಾಪ್ಕಿದನ್ಸ್ ವಿಶ್ವವಿದ್ಯಾಲಯವು ಕ್ವಿನ್ ಸಿಟಿ ಯೋಜನೆಯಲ್ಲಿ ಹೊಸ ಉನ್ನತ ಶಿಕ್ಷಣ ಸಂಸ್ಥೆ ಸ್ಥಾಪಿಸಲು ರಾಜ್ಯ ಸರಕಾರದ ಜೊತೆ ಪಾಲುದಾರಿಕೆಯ ಸಾಧ್ಯತೆಗಳನ್ನು ಪರಿಶೀಲಿಸುತ್ತಿದೆ. ರಾಜ್ಯದಲ್ಲಿ ಜಿಇ ಹೆಲ್ತ್ ಕೇರ್ ನ ವೈದ್ಯಕೀಯ ಉಪಕರಣಗಳ ತಯಾರಿಕಾ

2ನೇ ಪುಟಕ್ಕೆ

# ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಕಾಮಗಾರಿ ಹೆಸರಿನಲ್ಲಿ ಅಕ್ರಮ: ತನಿಖೆಗೆ ಒತ್ತಾಯ

**ರಾಯಚೂರು. ಅ.8 –** ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಸಿವಿಲ್ ವಿಭಾಗದಲ್ಲಿ ನೂರಾರು ಕೋಟಿ ರೂ ಬ್ರಷ್ಟಚಾರ ನಡೆದಿದು ಸಿವಿಲ್ ವಿಭಾಗದ ಮುಖ್ಯ ಅಧೀಕ್ಷಕ ಅಭಿಯಂತರ(ಎಸ್ಇ) ಪ್ರಭಾರ ಹುದ್ದೆಯಲ್ಲಿರುವ ಸಿ.ಬೋರಯ್ಯ ಇವರೇ ಕಾರಣವಾಗಿದ್ದು ಕೂಡಲೇ ಅಮಾನತ್ಗೊಳಿಸಿ ತನಿಖೆ ನಡೆಸಬೇಕೆಂದು ಕರ್ನಾಟಕ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಚಿಟ್ಟಿಬಾಬು ಬೂದಿವಾಳ್ ಕ್ಯಾಂಪ್ ಒತ್ತಾಯಿಸಿದರು.

ಅವರಿಂದು ಮಾಧ್ಯಮಗೋಷ್ಟಿ ಉದ್ದೇಶಿಸಿ ಮಾತನಾಡಿ, ಕಲ್ಬುಗಿ ವ್ಯಾಪ್ತಿಗೆ 9 ವಿಭಾಗಳಿದ್ದು, ವಿವಿಧ



ಯೋಜನೆಗಳಲ್ಲಿ ಅನುಮೋದನೆ ಯಿಲ್ಲದೇ ಕಾಮಗಾರಿಗಳನ್ನು ನಿರ್ವಹಿಸಿ ಆರ್ಥಿಕ ನಷ್ಟಕ್ಕೆ ಬೋರಯ್ಯ ಕಾರಣರಾಗಿರ್ದ್ದಾರೆ.ಪೂರ್ಣಗೊಂಡಿರುವ ಕೆಲಸಗಳಿಗೂ ಟೆಂಡರ್ ಕರೆದು ಹಣ ಎತ್ತುವ ಕಾರ್ಯ ನಡೆಸುತ್ತಿದ್ದಾರೆ.

ಗಂಗಾವತಿ ಸಾರಿಗೆ ಘಟಕ ವ್ಯವಸ್ಥಾಪಕರ ಕಾರ್ಯಾಲಯದ ಮುಂದೆ ಒಂದ ಮಹಡಿ ಕಳಪೆಯಾಗಿ ನಿರ್ವಹಿಸಿ ಎರಡನೇ ಹಂತ ಮಹಡಿ ಕಾಮಗಾರಿ ಕೈಗೊಳ್ಳಲಾಗಿದೆ. ಅನಧಿಕೃತ ಗುತ್ತಿಗೆದಾರರಿಂದ ಕಾಮಗಾರಿ ನಿರ್ವಹಿಸಿ ಜುಲೈ ತಿಂಗಳಲ್ಲಿ ಕಾಮಗಾರಿ ಪೂರ್ಣಗೊಂಡಿದ್ದರು ಸೆಪ್ಟಂಬರ್ನಲ್ಲಿ ದಾಖಲೆಗಳನ್ನು ಸಿದ್ದಪಡಿಸಲಾಗಿದೆ. 4...50 ಕೋಟಿ ರೂ ಅಕ್ರಮಕ್ಕೆ ಕಾರಣರಾಗಿದ್ದಾರೆ. ಅನೇಕ ಅಕ್ರಮದಲ್ಲಿ ಭಾಗಿಯಾಗಿರುವ ಬೋರೆಯ್ಯನವರಿಗೆ ಕೆಕೆಎಸ್ ಆರ್ಟಿಸಿ ಎಂಡಿಯವರೇ ರಕ್ಷಕರಾಗಿ ನಿಂತಿದ್ದಾರೆ. ಅನೇಕ ದೂರುಗಳು ನೀಡಿದ್ದರೂ ಇಂದಿಗೂ ಕ್ರಮ ಕೈಗೊಂಡಿಲ್ಲ ಕೂಡಲೇ ಸರ್ಕಾರ ತನಿಖೆಗೆ ಆದೇಶಿಸಬೇಕೆಂದರು.

ಹನುಮಂತಪ್ಪ ಮಾತನಾಡಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಪ್ರಭಾರಿ ಎಸ್ಸಿ ಆಗಿರುವ

2ನೇ ಪುಟಕ್ಕೆ

ಯುವ ಮಾರ್ಗ YUVA MARGA KANNADA DAILY NEWS PAPER ಬುಧವಾರ 09-10-2024

## ಮೊದಲನೇ ಪುಟದಿಂದ

## ಹರಿಯಾಣದಲ್ಲಿ ಬಿಜೆಪಿ ಹ್ಯಾಟ್ರಿಕ್, ಜಮ್ಮು- ಕಾಶ್ಮೀರದಲ್ಲಿ ಕೈ ಮೈತ್ರಿಗೆ ಪವರ್

ಬಾರಿಗೆ ಅಧಿಕಾರಕ್ಕೇರಲು ಸಜ್ಜಾಗಿದೆ. ಇತ್ತ ಕೇಂದ್ರಾಡಳಿತ ಪ್ರದೇಶದಲ್ಲಿ ನ್ಯಾಷನಲ್ ಕಾನ್ಫರೆನ್ಸ್ ಮತ್ತು ಕಾಂಗ್ರೆಸ್ ಮೈತ್ರಿ ಸ್ಪಷ್ಟ ಬಹುಮತದತ್ತ ದಾಪುಗಾಲಿಟ್ಟಿದೆ.

ಎಕ್ಸಿಟ್‌ಪೋಲ್ ಹೇಳಿದ್ದೇನು?: ಇಂಡಿಯಾ ಟುಡೇ-ಸಿ ವೋಟರ್, ರಿಪಬ್ಲಿಕ್ ಮ್ಯಾಟ್ರಿಝ್, ರಿಪಬ್ಲಿಕ್ ಪಿಮಾರ್ಕ್, ಎಕ್ಸಿಸ್ ಮೈ ಇಂಡಿಯಾ, ಪೀಪಲ್ಸ್ ಪಲ್ಸ್ ಸೇರಿದಂತೆ ಬಹುತೇಕ ಸಮೀಕ್ಷೆಗಳು ಈ ಬಾರಿಯ ಹರಿಯಾಣ ವಿಧಾನಸಭೆ ಚುನಾವಣೆಯಲ್ಲಿ 45ರಿಂದ 60 ಸ್ಥಾನಗಳನ್ನು ಪಡೆಯುತ್ತದೆ. ಬಿಜೆಪಿ 18ರಿಂದ 32 ಸ್ಥಾನಗಳಲ್ಲಿ ಮಾತ್ರ ಗೆಲುವು ಸಾಧಿಸಲಿದೆ ಎಂದು ಅಂದಾಜಿ ಸಿದ್ದವು. ಅಂದರೆ, ಆಡಳಿತಾರೂಢ ಬಿಜೆಪಿಗೆ ಮುಖಭಂಗವಾಗಲಿವೆ. ಕಾಂಗ್ರೆಸ್ ನಿಚ್ಚಳ ಬಹುಮತ ಸಾಧಿಸಲಿದೆ ಎಂದು ಚುನಾವಣೋತ್ತರ ಸಮೀಕ್ಷೆಗಳು ಭವಿಷ್ಯ ನುಡಿದಿದ್ದವು.

ಆದರೆ, ಫಲಿತಾಂಶ ಹೊರಬೀಳುತ್ತಿರುವಂತೆಯೇ ಎಲ್ಲವೂ ಉಲ್ಟಾ ಆಗಿದೆ. ಬಿಜೆಪಿ ಸತತ ಮೂರನೇ ಬಾರಿಗೆ ಸರ್ಕಾರ ರಚಿಸುವ ಹೊಸ್ತಿಲಲ್ಲಿದೆ. 90 ಸ್ಥಾನಗಳಲ್ಲಿ ಬಿಜೆಪಿ 50ರಲ್ಲಿ ಮುನ್ನಡೆಯಲ್ಲಿದೆ. ಕಾಂಗ್ರೆಸ್ 35 ಸ್ಥಾನಗಳಿಗೆ ಸೀಮಿತವಾಗಿದೆ. ಬಹುಮತಕ್ಕೆ ಬೇಕಾಗಿರುವ ಮ್ಯಾಜಿಕ್ ಸಂಖ್ಯೆ 46 ಆಗಿದೆ.

ಕಣಿವೆಯಲ್ಲಿ ಕಾಂಗ್ರೆಸ್ ಮೈತ್ರಿಗೆ ಸ್ಪಷ್ಟ ಬಹುಮತ: ಇನ್ನೂ, ಕೇಂದ್ರಾಡಳಿತ ಪ್ರದೇಶ ಜಮ್ಮು ಕಾಶ್ಮೀರದಲ್ಲಿ ಸ್ಪಷ್ಟ ಬಹುಮತದ ಸರ್ಕಾರ ಬರುವುದು ನಿಚ್ಚಳವಾಗಿದೆ. ಕಾಂಗ್ರೆಸ್ ಮತ್ತು ನ್ಯಾಷನಲ್ ಕಾನ್ಫರೆನ್ಸ್ ಪಕ್ಷಗಳ ಮೈತ್ರಿಯು 90 ಸ್ಥಾನಗಳಲ್ಲಿ 49 ಸ್ಥಾನಗಳಲ್ಲಿ ಮುನ್ನಡೆ ಅಥವಾ ಗೆಲುವಿನ ಸನಿಹದಲ್ಲಿದೆ. ಚುನಾವಣೋತ್ತರ ಸಮೀಕ್ಷೆಗಳ ಪ್ರಕಾರ, ಕಣಿವೆಯಲ್ಲಿ ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ಸಿಗುವುದಿಲ್ಲ ಎಂದು ಅಂದಾಜಿಸಲಾಗಿತ್ತು. ಇಲ್ಲಿಯೂ ಭವಿಷ್ಯ ಸುಳ್ಳಾಗಿದೆ. ಬಿಜೆಪಿ 29 ಸ್ಥಾನಗಳನ್ನು ಪಡೆದುಕೊಳ್ಳುವ ಸಾಧ್ಯತೆ ಇದೆ.

ಈ ಮೂಲಕ ಮತಗಟ್ಟೆ ಸಮೀಕ್ಷೆಗಳ ಲೆಕ್ಕಾಚಾರ ಸತತವಾಗಿ ಉಲ್ಟಾ ಆಗುತ್ತಿವೆ. ಲೋಕಸಭೆ ಚುನಾವಣೆಯಲ್ಲೂ ಬಿಜೆಪಿ ಏಕಪಕ್ಷವಾಗಿ ಬಹುಮತ ಪಡೆಯಲಿದೆ. ಎನ್ಡಿಎ ಮೈತ್ರಿಕೂಟಕ್ಕೆ ಗೆಲುವು ಸಿಗಲಿದೆ ಎಂದು ಭವಿಷ್ಯ ನುಡಿದಿದ್ದವು. ಆದರೆ, ಎಲ್ಲವೂ ಬುಡಮೇಲಾಗಿತ್ತು. ಯಾವುದೇ ಪಕ್ಷಕ್ಕೆ ಬಹುಮತ ಸಿಕ್ಕಿರಲಿಲ್ಲ.

## ಹರ್ಯಾಣ ಫಲಿತಾಂಶವನ್ನು ಒಪ್ಪಿಕೊಳ್ಳವುದಿಲ್ಲ ; ಮತಯಂತ್ರಗಳು, ಪ್ರಕ್ರಿಯೆಯನ್ನು ತಿರುಚಲಾಗಿದೆ : ಕಾಂಗ್ರೆಸ್

ಹೇಳಿದೆ. ಬಿಜೆಪಿಯು ಜನರ ತೀರ್ಪನ್ನು ಬುಡಮೇ ಲುಗೊಳಿಸಿದೆ ಎಂದು ಅದು ಆರೋಪಿಸಿದೆ.

ಮಧ್ಯಾಹ್ನವಿಡೀ ನಾನು ಚುನಾವಣಾ ಆಯೋಗದೊಂದಿಗೆ ಸಂಪರ್ಕದಲ್ಲಿದ್ದೆ. ನನ್ನ ದೂರಿಗೆ ಚುನಾವಣಾ ಆಯೋಗವು ಉತ್ತರಿಸಿದೆ. ಆ ಉತ್ತರಕ್ಕೆ ನಾನು ಪ್ರತಿಕ್ರಿಯಿಸಿದ್ದೇನೆ. ಕನಿಷ್ಠ ಮೂರು ಜಿಲ್ಲೆಗಳಲ್ಲಿ ಮತ ಎಣಿಕೆ ಪ್ರಕ್ರಿಯೆ ಮತ್ತು ಇಲೆಕ್ಟ್ರಾನಿಕ್ ಮತಯಂತ್ರಗಳ ಕಾರ್ಯವೈಖರಿ ಬಗ್ಗೆ ನಮಗೆ ಅತ್ಯಂತ ಗಂಭೀರ ದೂರುಗಳು ಬಂದಿವೆ. ನಾವು ಹರ್ಯಾಣದಲ್ಲಿರುವ ನಮ್ಮ ಹಿರಿಯ ಸಹೋದ್ಯೋಗಿಗಳೊಂದಿಗೆ ಮಾತನಾಡಿದ್ದೇವೆ. ಈ ಮಾಹಿತಿಗಳನ್ನು ಸಂಗ್ರಹಿಸಲಾಗುತ್ತಿದೆ ಮತ್ತು ಇವುಗಳನ್ನು ನಾವು ಕ್ರೋಢೀಕರಿಸಿ ಚುನಾವಣಾ ಆಯೋಗಕ್ಕೆ ಸಲ್ಲಿಸುವ ಉದ್ದೇಶವನ್ನು ಹೊಂದಿದ್ದೇವೆ'' ಎಂದು ಮಂಗಳವಾರ ಸಂಜೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದರು.

ಹರ್ಯಾಣದ ಫಲಿತಾಂಶವು ಸಂಪೂರ್ಣ ಅನಿರೀಕ್ಷಿತವಾಗಿದೆ, ಅಚ್ಚರಿಯಿಂದ ಕೂಡಿದೆ ಮತ್ತು ಸಾಮಾನ್ಯ ತಿಳುವಳಿಕೆಗೆ ವಿರುದ್ಧವಾಗಿದೆ ಎಂದು ಕಾಂಗ್ರೆಸ್ ನಾಯಕ ನುಡಿದರು.

ಇದು ಜನರ ಇಚ್ಛೆಯ ಬುಡಮೇಲು ಮತ್ತು ಪ್ರಜಾಸತ್ತಾತ್ಮಕ ಪ್ರಕ್ರಿ ಯೆಯ ಬುಡಮೇಲಿನ ವಿಜಯವಾಗಿದೆ'' ಎಂದು ಅವರು ಬಣ್ಣಿಸಿದರು.

ಮಂಗಳವಾರ ಮತ ಎಣಿಕೆ ಆರಂಭಗೊಂಡಾಗ, ಆರಂಭಿಕ ಸುತ್ತುಗಳಲ್ಲಿ ಕಾಂಗ್ರೆಸ್ ಮುನ್ನಡೆ ಗಳಿಸಿತ್ತು. ದಿಲ್ಲಿ ಮತ್ತು ಚಂಡೀಗಢಗಳಲ್ಲಿರುವ ಪಕ್ಷದ ಕಚೇರಿಗಳಲ್ಲಿ ಸಂಭ್ರಮ ನೆಲೆಸಿತ್ತು. ಆದರೆ, ಬಳಿಕ ಬಿಜೆಪಿಯು ಮುನ್ನಡೆ ಗಳಿಸುತ್ತಾ ಸಾಗಿ ನಿರ್ಣಾಯಕ ವಿಜಯವನ್ನು ಗಳಿಸಿದೆ.

ಹರ್ಯಾಣ ವಿಧಾನಸಭಾ ಚುನಾವಣೆಯ ಫಲಿತಾಂಶವು ತೀರಾ ಅನಿರೀಕ್ಷಿತ ಮತ್ತು ಅಸ್ವೀಕಾರಾರ್ಹವಾಗಿದೆ. ನಮಗೆ ಹಿಸ್ಸಾರ್, ಮಹೇಂದ್ರ ಗಢ ಮತ್ತು ಪಾಣಿಪತ್ ಜಿಲ್ಲೆಗಳಿಂದ ಇಲೆಕ್ಟ್ರಾನಿಕ್ ಮತಯಂತ್ರಗಳ ವೈರುಧ್ಯಗಳ ಬಗ್ಗೆ ದೂರುಗಳು ಬಂದಿವೆ. ನಮ್ಮ ಅಭ್ಯರ್ಥಿಗಳು ಚುನಾವಣಾಧಿಕಾರಿಗಳಿಗೆ ದೂರು ನೀಡಿದ್ದಾರೆ. ಆದರೆ, ನಾವು ಈ ಎಲ್ಲಾ ದೂರುಗಳನ್ನು ಚುನಾವಣಾ ಆಯೋಗಕ್ಕೆ ಒಯ್ಯುತ್ತೇವೆ'' ಎಂದು ಕಾಂಗ್ರೆಸ್ ನಾಯಕ ಪವನ್ ಖೇರಾ ಹೇಳಿದರು.

## ಸಾಂಸ್ಕೃತಿಕ ಚಟುವಟಿಕೆಗಳಿಗೆ ಮುನ್ನೂರುಕಾಪು ಸಮಾಜ ರೂವಾರಿ- ಶ್ರೀಧರ ರೆಡ್ಡಿ

ಕೊಂಡಿರುವುದು ಅತ್ಯಂತ ಶ್ಲಾಘನೀಯ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಕಲ್ಯಾಣ ಸತ್ಯ ಪತ್ರಿಕೆಯ ಸಂಪಾದಕರಾದ ಕೆ. ಸತ್ಯನಾರಾಯಣ ಮಾತನಾಡಿ, ಸಾಂಸ್ಕೃತಿಕ ರೂವಾರಿ ಮಾಜಿ ಶಾಸಕ ಎ. ಪಾಪಾರೆಡ್ಡಿ ಅವರು ಹೊಸ ಟ್ರೆಂಡ್ ಸೃಷ್ಟಿಸುವಲ್ಲಿ ಜಿಲ್ಲೆಯಲ್ಲಿ ಮೊದಲಿಗರು,ಹೊಸ ಕಲೆ ಹಿನ್ನಲೆ ಪಾಪಾರೆಡ್ಡಿ ಅವರಿಗೆ ರಾಷ್ಟ್ರಮಟ್ಟದ ಐಕಾನ್ ಲೆಜೆಂಡ್ ಪ್ರಶಸ್ತಿ ಭಾಜನರಾಗುವಂತೆ ಮಾಡಿದೆ. ಪಾಪಾರೆಡ್ಡಿ ಅವರು ಛಲಗಾರ ಹಿಡಿದ ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸುತ್ತಿವ ಮೂಲಕ ಜನಮನ್ನಣೆ ದೊರೆಯುವಂತೆ ಮಾಡುತ್ತಿದೆ ಎಂದರು.ಮುಂಗಾರು ನಂತರ ನವರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜನಮನ್ನಣೆ ಹೇಗೆ ದೊರೆಯುತ್ತಿದೆ ಎಂಬುದು ಈ ಸಮಾಜ ಉತ್ತಮ ನಿರ್ದೇಶನವಾಗಿದೆ ಎಂದು .

ಮುಂಗಾರು ನಂತರ ನವರಾತ್ರಿ ಕಾರ್ಯಕ್ರಮಗಳನ್ನು ಅತ್ಯಂತ ಅದ್ದೂರಿಯಾಗಿ ನಿರ್ವಹಿಸುವ ಮೂಲಕ ಮುನ್ನೂರು ಕಾಪು ಸಮಾಜ ರಾಜ್ಯ ಹಾಗೂ ದೇಶಕ್ಕೆ ಮಾದರಿಯಾಗಿದೆ ಎಂದರು.

ಎ. ಪಾಪಾರೆಡ್ಡಿ ಅವರು ಸಮಾಜವನ್ನು ಅಭಿವೃದ್ಧಿಯಲ್ಲಿ ಮುಂದೆ ತರುವುದರ ಮೂಲಕ ಸಮಾಜವನ್ನು ಬಲಿಷ್ಠವನ್ನಾಗಿ ಸಮಾಜವಾಗಿ ಗುರುತಿಸಿಕೊಂಡಿದ್ದಾರೆ. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಅತ್ಯಂತ ಅದ್ದೂರಿಯಾಗಿ ಆಚರಣೆ ಮಾಡುವುದರ ಮೂಲಕ ಎ. ಪಾಪಾರೆಡ್ಡಿ ಅವರು ನವರಾತ್ರಿ ಉತ್ಸವಕ್ಕೆ ಮೆರುಗು ತಂದಿದ್ದಾರೆ.

ಮುರುಳಿಧರ ಕುಲಕರ್ಣಿ ಕಾರ್ಯಕ್ರಮ ನಿರೂಪಿಸಿದರು.ನಾಗರಾಜ ರೆಡ್ಡಿ ಅವರು ಸ್ವಾಗತಿಸಿದರು. ಸುಮಾರು 3 ತಂಡಗಳು ಸ್ಪರ್ಧೆಯಲ್ಲಿ ಪಾಲ್ಗೊಂಡು ಅದ್ಬುತ ನೃತ್ಯ ಪ್ರದರ್ಶನ ನೀಡಿದರು.

ಸ್ಪರ್ಧೆ ನಿರ್ಣಾಯಕರಾಗಿ ಶಾಂತ ಕುಲಕರ್ಣಿ ಅವರು ವಹಿಸಿದ್ದರು.ಕಾರ್ಯಕ್ರಮದ ಉಪನ್ಯಾಸಕಾರಾಗಿ ವಸುಂದರಾ ಪಾಟೀಲ್ ಅವರು ನವರಾತ್ರಿ ಕಾರ್ಯಕ್ರಮದ ಸುವಿಸ್ತರವಾಗಿ ಮಾತನಾಡಿದರು

ಈ ಸಂದರ್ಭದಲ್ಲಿ ವೇದಿಕೆ ಮೇಲೆ ನವರಾತ್ರಿ ಉತ್ಸವ ರೂವಾರಿ ಮಾಜಿ ಶಾಸಕ ಮುನ್ನೂರು ಕಾಪು ಸಮಾಜದ ಹಿರಿಯ ಮುಖಂಡರು ಎ. ಪಾಪಾರೆಡ್ಡಿ, ಯು ಉಟ್ಕೂರು ಕೃಷ್ಣಮೂರ್ತಿ,ಗಾಧರ ಬೆಟ್ಟಪ್ಪ, ಬುಡತಪ್ಪಗಾರು ರಾಘವೇಂದ್ರ, ಜಿ. ಟಿ ರೆಡ್ಡಿ, ರಾಜಕುಮಾರ, ಪಾಳ್ಯಂ ಮಲ್ಲೇಶ, ಮುನ್ನೂರು ಕಾಪು ಸಮಾಜ ಹಿರಿಯ ಮುಖಂಡರು ಸೇರಿದಂತೆ ಉಪಸ್ಥಿತರಿದ್ದರು

## ಕಲಬುರ್ಗಿಗೆ ಅಕ್ಟೋಬರ್ 10,11ರಂದು ಕನ್ನಡ ಜ್ಯೋತಿ ರಥಯಾತ್ರೆ



**ಕಲಬುರ್ಗಿ, ಅ.8:** ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಕನ್ನಡಜ್ಯೋತಿ ರಥಯಾತ್ರೆ, ರಾಜ್ಯದಾದ್ಯಂತ ಸಂಚರಿಸುತ್ತಿದ್ದು, ಅದು ಕಲಬುರಗಿ ಜಿಲ್ಲೆಗೆ ಅಕ್ಟೋಬರ್ 10 ಮತ್ತು 11ರಂದು ಬರುತ್ತಿರುವುದರಿಂದ ಎಲ್ಲರೂ ಸೇರಿ ಬಹು ವಿಜ್ರಂಭಣೆಯಿಂದ ಸ್ವಾಗತಿಸೋಣ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ವಿಜಯಕುಮಾರ್ ಪಾಟೀಲ್ ತೇಗಲತಿಪ್ಪಿ ಅವರು ಹೇಳಿದರು.

ಜಿಲ್ಲೆಗೆ ಆಗಮಿಸುತ್ತಿರುವ ಕನ್ನಡ ಜ್ಯೋತಿ ರಥಯಾತ್ರೆಯ ನಿಮಿತ್ತ ನಗರದ ಕನ್ನಡ ಭವನದಲ್ಲಿ ಜರುಗಿದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕನ್ನಡಿಗರಲ್ಲಿ ಕನ್ನಡಾಭಿಮಾನದ ಜತೆಗೆ ಕನ್ನಡತನವನ್ನು ಬೆಳೆಸುವ ಉದ್ದೇಶದಿಂದ ಈ ಕನ್ನಡ ಜ್ಯೋತಿ ರಥ ಯಾತ್ರೆ ನಡೆಯುತ್ತಿದೆ. ಕನ್ನಡ ನಾಡು ನುಡಿ ಭಾಷೆಗೆ ತನ್ನದೇಯಾದ ಶ್ರೀಮಂತಿಕೆ ಇದ್ದು, ಕನ್ನಡಿಗರೆಲ್ಲರೂ ಒಗ್ಗಟ್ಟಿನಿಂದ ಕನ್ನಡ ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸಲು ಹಾಗೂ ಬೆಳೆಸಿಕೊಂಡು ಹೋಗಲು ಶ್ರಮಿಸಬೇಕು ಎಂದರು.

ಪರಿಷತ್ ಜಿಲ್ಲಾ ಗೌರವ ಕಾರ್ಯದರ್ಶಿಗಳಾದ ಶಿವರಾಜ್ ಅಂಡಗಿ, ಧರ್ಮಣ್ಣ ಎಚ್. ಧನ್ನಿ, ಕೋಶಾಧ್ಯಕ್ಷ ಶರಣರಾಜ್ ಛಪ್ಪರಬಂದಿ, ಸಂಘ ಸಂಸ್ಥೆ ಪ್ರತಿನಿಧಿ ಕಲ್ಯಾಣಕುಮಾರ್ ಶೀಲವಂತ್, ಪ್ರಮುಖರಾದ ರವೀಂದ್ರಕುಮಾರ್ ಭಂಟನಳ್ಳಿ, ಸಿದ್ಧಲಿಂಗ ಜಿ. ಬಾಳಿ, ರಾಜೇಂದ್ರ ಮಾಡಬೂಳ್, ಎಂ.ಎನ್. ಸುಗಂಧಿ, ಬಾಬುರಾವ್ ಪಾಟೀಲ್, ಶರಣಬಸಪ್ಪ ನರೂಣಿ, ವಿನೋದಕುಮಾರ್ ಜೇನವೇರಿ, ರಮೇಶ್ ಡಿ. ಬಡಿಗೇರ್, ಗುರುಬಸಪ್ಪ ಸಜ್ಜನಶೆಟ್ಟಿ, ಶರಣಬಸಪ್ಪ ಕೋಬಾಳ್, ನಾಗಪ್ಪ ಸಜ್ಜನ್, ಸುರೇಶ್ ದೇಶಪಾಂಡೆ, ಸುರೇಶ್ ಲೆಂಗಟಿ, ಶಿವಶರಣ್ ಬಡದಾಳ್, ವೀರೇಂದ್ರಕುಮಾರ್ ಕೊಲ್ಲೂರ್, ಮಧೂಸೂಧನ್ ಚಿಂತನಪಳ್ಳಿ, ರೇವಣಸಿದ್ಧಪ್ಪ ಜೀವಣಗಿ, ಪ್ರಭುಲಿಂಗ್ ಮೂಲಗೆ, ಶಿವಾನಂದ್ ಮಠಪತಿ, ಸಂತೋಷ್ ಕುಡಳ್ಳಿ ಮುಂತಾದವರು ಭಾಗವಹಿಸಿದ್ದರು.

## ಒಂಬತ್ತು ದೇವಿಯನ್ನು ಪ್ರತ್ಯಕ್ಷವಾಗಿ ಕಾಣಬಹುದು: ಬಿಕೆ ಕಲಾವತಿ ಅಕ್ಕ



**ಸೇಡಂ. ಅ.8–** ಹೋದ ವರ್ಷದಂತೆ ಈ ವರ್ಷವೂ ಸಹ ಸಡಗರ ಸಂಭ್ರಮದಿಂದ ಚೈತನ್ಯ ದೇವಿಯವರ ದರ್ಶನ ಪೂಜೆ ಕಾರ್ಯಕ್ರಮ ಪ್ರಯುಕ್ತ ದಸರಾ ಹಬ್ಬ ಹಾಗೂ ಮಕ್ಕಳನ್ನು ಒಂಬತ್ತು ದೇವಿಯ ವೇಷ ಭೂಷಣ ಧರಿಸಿ ಪ್ರತ್ಯಕ್ಷವಾಗಿ ದೇವಿಯ ರೂಪದಲ್ಲಿ ಕಾಣಬಹುದು ಎಂದು ಬ್ರಹ್ಮಕುಮಾರಿ ಆಶ್ರಮದ ಕಲಾವತಿ ಅಕ್ಕನವರು ಹೇಳಿದರು,

ಪಟ್ಟಣದ ವಿದ್ಯಾನಗರ ಬಡಾವಣೆಯಲ್ಲಿ ಚೈತನ್ಯ ದೇವಿಯವರ ದರ್ಶನ ಪೂಜೆ ಕಾರ್ಯಕ್ರಮ ಹಾಗೂ ದಸರಾ ಹಬ್ಬದ ವಿಶೇಷ ಸನ್ಮಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮನಸು ಶುದ್ಧ. ಕಾಯಕ ಶುದ್ಧ. ಮಾತಿನಲ್ಲಿ ಶುದ್ಧ ಸೇರಿದಂತೆ ಪ್ರತಿಯೊಂದರಲ್ಲಿ ನಾವು ಶುದ್ಧತೆಗೆ ಪ್ರಾಮುಖ್ಯತೆ ನೀಡಬೇಕು ಎಂದು ಸಲಹೆ ಮಾಡಿದರು,

ದಸರಾ ಹಬ್ಬದಲ್ಲಿ ಮಹಿಳೆಯರು ಪ್ರತಿ ಮನೆಯಲ್ಲಿ ವಿಶೇಷವಾಗಿ ಸ್ವಚ್ಚತೆ ಮಾಡುವದು ನಮ್ಮ ಹಿಂದೂ ಸಾಂಪ್ರದಾಯಿಕವಾಗಿದೆ ಎಂದು ಅವರು ಹೇಳಿದರು, ನೂತನ ಪುರಸಭೆ ಅಧ್ಯಕ್ಷ ವಿರೇಂದ್ರ, ರೂದ್ನೂರ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲ್ಲೂಕು ಅಧ್ಯಕ್ಷ ರಾಜಶೇಖರ್ ನಿಲಂಗಿ, ರಾಜ್ಯ ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ ಪಡೆದ ಬಸವರಾಜ್ ಕಾಳಗಿ ಹಾಗೂ ಹಣಮಂತ್ ಭರತನೂರ್ ಅವರನ್ನು ಈ ಸಮಯದಲ್ಲಿ ಬ್ರಹ್ಮಕುಮಾರಿ ಆಶ್ರಮದ ಕಲಾವತಿ ಅಕ್ಕನವರು ಶಾಲು ಹೊದಿಸಿ ಹಾರ ಹಾಕುವ ಮೂಲಕ ಗೌರವದಿಂದ ಸನ್ಮಾನ ಮಾಡಿದರು, ಸಂತೋಷ್ ತೋಟ್ನಳ್ಳಿ ಅವರು ವಂದಿಸಿದರು. ಪ್ರಕಾಶ್ ಗೋಣಿಗಿ ಅವರು ಕಾರ್ಯಕ್ರಮ ನಿರೂಪಿಸಿ ದರು.

## ಅಮೆರಿಕದ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳ ಆಸಕ್ತಿ : ಎಂ.ಬಿ.ಪಾಟೀಲ್

ಸಾಮರ್ಥ್ಯವನ್ನು ಸಹಯೋಗದ ಮೂಲಕ ಹೆಚ್ಚಿಸುವ ಸಾಧ್ಯತೆಗಳನ್ನೂ ಚರ್ಚಿಸಲಾಗಿದೆ ಎಂದು ಎಂ.ಬಿ. ಪಾಟೀಲ್ ತಿಳಿಸಿದ್ದಾರೆ. ವೈಮಾಂತರಿಕ್ಷ ಮತ್ತು ರಕ್ಷಣಾ ವಲಯದ ದೈತ್ಯ ಕಂಪನಿ ಎಲ್ 3 ಹ್ಯಾರಿಸ್ ಟೆಕ್ನಾಲಜೀಸ್ನ ಉಪಾಧ್ಯಕ್ಷ ಡೇವ್ ಜಾನ್ಸನ್ ಅವರ ಜೊತೆಗಿನ ಭೇಟಿಯಲ್ಲಿ ಕಂಪನಿಯು ಕರ್ನಾಟಕ ದಲ್ಲಿನ ತನ್ನ ವಿಸ್ತರಣಾ ಯೋಜನೆಗಳ ಬಗ್ಗೆ ವಿವರಗಳನ್ನು ಹಂಚಿಕೊಂಡಿದೆ ಎಂದು ಅವರು ಹೇಳಿದ್ದಾರೆ.

ಆರೋಗ್ಯ, ವೈಮಾಂತರಿಕ್ಷ, ರಕ್ಷಣೆ ಮತ್ತು ಉನ್ನತ ಶಿಕ್ಷಣದಂತಹ ಪ್ರಮುಖ ಕ್ಷೇತ್ರಗಳಲ್ಲಿ ಪಾಲುದಾರಿಕೆ ಮತ್ತು ಬಂಡವಾಳ ಹೂಡಿಕೆಗಳನ್ನು ಆಕರ್ಷಿ ಸಲು ಎಂ.ಬಿ.ಪಾಟೀಲ್, ಅಮೆರಿಕದ ಪ್ರಮುಖ ಉದ್ಯಮಗಳು ಮತ್ತು ಶೈಕ್ಷಣಿಕ ಸಂಸ್ಥೆಗಳ ಜೊತೆಗೆ ಫಲಪ್ರದ ಚರ್ಚೆ ನಡೆಸಿದ್ದಾರೆ. ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಭಾಗವಹಿಸಲು ಔಪಚಾರಿಕ ಆಹ್ವಾನವನ್ನೂ ನೀಡಿದ್ದಾರೆ. ವೈದ್ಯಕೀಯ ಸಲಕರಣೆಗಳ ತಯಾರಿಕಾ ವಲಯದಲ್ಲಿ ಪಾಲುದಾರಿಕೆ ಕುರಿತು ಚರ್ಚಿಸಲು ಜಿಇ ಹೆಲ್ತ್ ಕೇರ್‌ನಲ್ಲಿ ಅಂತರ ರಾಷ್ಟ್ರೀಯ ವ್ಯಾಪಾರ ಮತ್ತು ನೀತಿಯ ಕಾರ್ಯನಿರ್ವಾಹಕ ನಿರ್ದೇಶಕ ಆಂಡ್ರ್ಯೂ ಕ್ವಿನ್ ಅವರನ್ನು ಎಂ.ಬಿ.ಪಾಟೀಲ್ ಭೇಟಿಯಾಗಿದ್ದರು. ಸಚಿವರ ನೇತೃತ್ವದಲ್ಲಿನ ರಾಜ್ಯದ ನಿಯೋಗದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ.ಎಸ್.ಸೆಲ್ವಕುಮಾರ್, ಕೈಗಾರಿಕಾ ಇಲಾಖೆ ಆಯುಕ್ತೆ ಗುಂಜನ್ ಕೃಷ್ಣ ಮತ್ತು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಮಹೇಶ್ ಇದ್ದಾರೆ.

## 3ನೇ ಬಾರಿಗೆ ಅಧಿಕಾರಕ್ಕೇರಿದೆ': ಪ್ರಧಾನಿ ಮೋದಿ

ಬಳಿಕ ಪ್ರಧಾನಿ ನರೇಂದ್ರ, ಮೋದಿ, ಕಾರ್ಯಕರ್ತರನ್ನುದ್ದೇಶಿಸಿ ಭಾಷಣ ಮಾಡಿದ್ದು, 'ಬಿಜೆಪಿಗೆ ಇದು ಐತಿಹಾಸಿಕ ಗೆಲುವಾಗಿದ್ದು, ಹರ್ಯಾಣದಲ್ಲಿ ಮೊದಲ ಬಾರಿಗೆ ಪಕ್ಷವೊಂದು 3ನೇ ಬಾರಿಗೆ ಅಧಿಕಾರಕ್ಕೇರಿದೆ' ಎಂದು ಹೇಳಿದ್ದಾರೆ.

'1966ರಲ್ಲಿ ಹರಿಯಾಣ ರಚನೆಯಾಗಿದ್ದು, ಈ ವರೆಗೂ 13 ಚುನಾವಣೆಗಳು ನಡೆದಿವೆ. ಈ 13 ಚುನಾವಣೆಗಳ ಪೈಕಿ 10 ಚುನಾವಣೆಯಲ್ಲಿ ಜನರು ಸರ್ಕಾರವನ್ನು ಬದಲಾಯಿಸಿದ್ದಾರೆ. ಆದರೆ ಕಳೆದ ಮೂರು ಚುನಾವಣೆಗಳಲ್ಲಿ ಆ ಬದಲಾವಣೆ ಆಗಿಲ್ಲ. ಹರ್ಯಾಣದಲ್ಲಿ ಸರ್ಕಾರವೊಂದು ಎರಡು ಬಾರಿ ಅಧಿಕಾರ ಪಡೆದು ಮೂರನೇ ಬಾರಿಗೆ ಗೆದ್ದಿರುವುದು ಇದೇ ಮೊದಲು. ಹರಿಯಾಣದ ಜನರು ನಮ್ಮನ್ನು ಗೆಲ್ಲಿಸಿದ್ದು ಮಾತ್ರವಲ್ಲದೆ ನಮಗೆ ಹೆಚ್ಚಿನ ಸ್ಥಾನಗಳನ್ನು ಮತ್ತು ಹೆಚ್ಚಿನ ಮತ ಹಂಚಿಕೆಯನ್ನು ನೀಡಿದ್ದಾರೆ. ಅವರು ಮನಃಪೂರ್ವಕವಾಗಿ ನಮಗೆ ಮತ ಹಾಕಿದ್ದಾರೆ ಎಂದು ಹೇಳಿದರು.

ಹರ್ಯಾಣ ಗೆಲುವು ದೇಶದಾದ್ಯಂತ ಪ್ರತಿಧ್ವನಿಸಲಿದೆ

ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯ ಗೆಲುವು ಅಭಿವೃದ್ಧಿ ಮತ್ತು ಉತ್ತಮ ಆಡಳಿತದ ರಾಜಕೀಯದ ಗೆಲುವಾಗಿದ್ದು, ಹರಿಯಾಣದ ಜನರು ಅದ್ಭುತ ಫಲಿತಾಂಶವನ್ನು ನೀಡಿದ್ದಾರೆ. ಇಂದು ನವರಾತ್ರಿಯ ಆರನೇ ದಿನ. ಮಾತಾ ಕಾತ್ಯಾಯನಿಯ ದಿನ. ಮಾತಾ ಕಾತ್ಯಾಯನಿ ಕೈಯಲ್ಲಿ ಕಮಲ ಹಿಡಿದು ಸಿಂಹದ ಮೇಲೆ ಕುಳಿತಿದ್ದಾಳೆ. ಅವಳು ನಮ್ಮೆಲ್ಲರನ್ನು ಆಶೀರ್ವದಿಸುತ್ತಿದ್ದಾಳೆ. ಇಂತಹ ಪವಿತ್ರ ದಿನದಂದು ಹರಿಯಾಣದಲ್ಲಿ ಮೂರನೇ ಬಾರಿಗೆ ಕಮಲ ಅರಳಿದೆ. ಹರಿಯಾಣದಲ್ಲಿ ಕೇಸರಿ ಪಕ್ಷದ ಗೆಲುವು ದೇಶದಾದ್ಯಂತ ಪ್ರತಿಧ್ವನಿಸಲಿದೆ ಎಂದು ಮೋದಿ ಸಂತಸ ವ್ಯಕ್ತಪಡಿಸಿದರು.

ಅಧಿಕಾರ ಇಲ್ಲದೇ ನೀರಿನಿಂದ ಹೊರ ಬಿದ್ದ ಮೀನಿನಂತಾಗಿದೆ ಕಾಂಗ್ರೆಸ್

ಅಂತೆಯೇ ಕಾಂಗ್ರೆಸ್ ಹೆಸರು ಹೇಳದೇ ಆ ಪಕ್ಷದ ವಿರುದ್ಧ ಕಿಡಿಕಾರಿದ ಪ್ರಧಾನಿ ಮೋದಿ, 'ಭಾರತದ ಆರ್ಥಿಕತೆ, ಪ್ರಜಾಪ್ರಭುತ್ವ ಮತ್ತು ಸಾಮಾಜಿಕ ರಚನೆಯನ್ನು ದುರ್ಬಲಗೊಳಿಸಲು ಜಾಗತಿಕ ಪಿತೂರಿಗಳನ್ನು ರೂಪಿಸಲಾಗುತ್ತಿದೆ. ಈ ಪ್ರಯತ್ನದಲ್ಲಿ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಭಾಗಿಯಾಗಿವೆ. ಚುನಾವಣಾ ಆಯೋಗ, ಪೊಲೀಸ್, ನ್ಯಾಯಾಂಗ ಸೇರಿದಂತೆ ದೇಶದ ಪ್ರಮುಖ ಸಂಸ್ಥೆಗಳ ಪ್ರತಿಷ್ಠೆಗೆ ಧಕ್ಕೆ ತರುವ ಪ್ರಯತ್ನವನ್ನು ಕಾಂಗ್ರೆಸ್ ಮಾಡುತ್ತಿದೆ ಎಂದು ಟೀಕಿಸಿದ್ದಾರೆ.

ಮೊದಲು ಕಾಂಗ್ರೆಸ್ ಕೆಲಸ ಮಾಡದರೂ, ಮಾಡಿದಿದ್ದರೂ ಜನರು ಮತ ಕೊಡ್ತಾರೆ ಅನ್ನುವ ಮನಸ್ಥಿತಿ ಇತ್ತು. ಸರ್ಕಾರ ತಮ್ಮ ಜನ್ಮಸಿದ್ಧ ಹಕ್ಕು ಎಂದು ಭಾವಿಸುತ್ತಿತ್ತು. ಅಧಿಕಾರ ಇಲ್ಲದೇ ನೀರಿನಿಂದ ಹೊರ ಬಿದ್ದ ಮೀನಿನಂತೆ ಕಾಂಗ್ರೆಸ್ ಆಗಿದೆ. ಈಗ ಅವರ ಪರಿಸ್ಥಿತಿ ಬದಲಾಗಿದೆ. ಕಾಂಗ್ರೆಸ್ ಹೇಗೆ ವಿಷ ಬೀಜ ಬಿತ್ತಿದೆ ಎಂದು ಇಡೀ ದೇಶವೇ ನೋಡಿದೆ. ಹಲವು ತಲೆಮಾರುಗಳನ್ನು ಜಾತಿ ಹೆಸರಿನಲ್ಲಿ ಹೊಡೆದಾಡಲು ಬಿಟ್ಟಿದೆ. ಹಿಂದುಳಿದ ವರ್ಗ, ದಲಿತರ ಮೇಲೆ ಹೆಚ್ಚು ಶೋಷಣೆ ಮಾಡಿದೆ. ಅಧಿಕಾರ ಸಿಕ್ಕಾಗ ಎಂದು ದಲಿತ ಹಿಂದುಳಿದ ವರ್ಗದವರಿಗೆ ಅಧಿಕಾರ ನೀಡಲಿಲ್ಲ. ಕಾಂಗ್ರೆಸ್ ಪರಿವಾರ ದಲಿತ ಹಿಂದುಳಿದ ಆದಿವಾಸಿಗಳನ್ನು ದ್ವೇಷ ಮಾಡುತ್ತದೆ. ಈ ಎಲ್ಲ ವರ್ಗದ ಜನರು ಉನ್ನತ ಸ್ಥಾನಕ್ಕೆ ಹೋಗ್ತಿದ್ದರೆ ಇವರ ಹೊಟ್ಟೆಯಲ್ಲಿ ಇಲಿ ಓಡಾಡುತ್ತವೆ ಎಂದರು.

ಮತ್ತೆ ಗ್ಯಾರಂಟಿ ಕಾಲೆಳದ ಮೋದಿ

ಇದೇ ವೇಳೆ ಮತ್ತೆ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳ ಕುರಿತು ಮಾತನಾಡಿದ ಮೋದಿ, 'ಸುಳ್ಳಿನ ರಾಶಿಯ ಮೇಲೆ ಅಭಿವೃದ್ಧಿ ಗ್ಯಾರಂಟಿ ಹೊರೆಯಾಯಿತು. ಹರಿಯಾಣ ಜನರು ಹೊಸ ಇತಿಹಾಸ ರಚಿಸಿದ್ದಾರೆ. 1966 ರಿಂದ ಸತತ ಮೂರನೇ ಬಾರಿಗೆ ಯಾವ ಪಕ್ಷ ಅಧಿಕಾರಕ್ಕೆ ಬಂದಿಲ್ಲ. ದೊಡ್ಡ ದೊಡ್ಡ ಪಕ್ಷಗಳು ಆಡಳಿತ ನಡೆಸಿವೆ. ಇದು ಯಾರಿಗೂ ಸಾಧ್ಯವಾಗಲಿಲ್ಲ. ಹರಿಯಾಣದ ಜನರು ಐದು ವರ್ಷಕ್ಕೊಮ್ಮೆ ಸರ್ಕಾರ ಬದಲಿಸುತ್ತಾರೆ. ಈ ಬಾರಿ ಹರಿಯಾಣದ ಜನರು ಮಾಡಿರುವುದು ಅಭೂತಪೂರ್ವವಾಗಿದೆ ಎಂದು ಹೇಳಿದರು.

ಕಾಶ್ಮೀರ ಜನತೆಗೂ ವಂದನೆಗಳು: ಜಮ್ಮು ಕಾಶ್ಮೀರ ಜನರು ಎನ್ಸಿ ಒಕ್ಕೂಟಕ್ಕೆ ಹೆಚ್ಚು ಸ್ಥಾನ ನೀಡಿದ್ದಾರೆ. ಅವರಿಗೂ ನಾನು ಅಭಿನಂದನೆ ಸಲ್ಲಿಸುತ್ತೇನೆ. ಎಷ್ಟು ಪಕ್ಷಗಳು ಚುನಾವಣಾ ಅಖಾಡದಲ್ಲಿದ್ದವು, ಅದರಲ್ಲಿ ಬಿಜೆಪಿ ಹೆಚ್ಚು ಮತ ಪಡೆದಿದೆ. ಅಲ್ಲಿ ಗೆಲವು ಸಾಧಿಸಿದ ಜನರಿಗೆ ಅಭಿನಂದನೆ ಹೇಳುತ್ತೇನೆ. ಎರಡು ರಾಜ್ಯದ ನಮ್ಮ ಕಾರ್ಯಕರ್ತರಿಗೆ ಧನ್ಯವಾದ ಹೇಳ್ತೀವಿ. ಇದು ಕಾರ್ಯಕರ್ತರ ಶ್ರಮದಿಂದ ಗೆಲುವು ಸಾಧ್ಯವಾಗಿದೆ. ನಡ್ಡಾ ಅವರ ತಂಡದ ಗೆಲುವಾಗಿದೆ. ನಮ್ಮ ಸಿಎಂ ಕರ್ತವ್ಯದ ಜಯವಾಗಿದೆ ಎಂದರು.

## ಅಕ್ರಮವಾಗಿ ಅಕ್ಕಿ ಸಾಗಾಟವಾಗಿಲ್ಲ ಆಹಾರ ಇಲಾಖೆ ಸ್ಪಷ್ಟನೆ

**ಕಲಬುರಗಿ, ಅ.8–** ಅ.2 ರಂದು ನಗರದ ಹೊರವಲಯದ ನಂದೂರ ಕೈಗಾರಿಕಾ ಪ್ರದೇಶದ ದಾಲ್ ಮಿಲ್ ವೊಂದರಲ್ಲಿ ಅಕ್ರಮ ಅಕ್ಕಿ ದಾಸ್ತಾನು ಕುರಿತು ಮಾಹಿತಿ ಬಂದ ತಕ್ಷಣವೆ ಇಲಾಖೆಯ ಅಧಿಕಾರಿಗಳ ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶಿಲಿಸಿದಾಗ ಅದು ಅಕ್ರಮ ಅಕ್ಕಿ ಅಲ್ಲ, ಬದಲಾಗಿ ಕಾನೂನು ಬದ್ಧವಾಗಿಯೇ ಅಕ್ಕಿ ಖರೀದಿಸಿದ ದಾಖಲೆಗಳು ಹಾಜರುಪಡಿಸಿದ ಕಾರಣ ಪ್ರಕರಣ ದಾಖಲಿಸಿಲ್ಲ. ಮಣಿಕಂಠ ರಾಠೋಡ ಅವರ ಆರೋಪ ಸತ್ಯಕ್ಕೆ ದೂರವಾಗಿದೆ ಎಂದು ಆಹಾರ ಇಲಾಖೆ ಉಪನಿರ್ದೇಶಕ ಭೀಮರಾಯ ಕಲ್ಲೂರು ಅವರು ಸ್ಪಷ್ಟನೆ ನೀಡಿದ್ದಾರೆ.

ಅ.2 ರಂದು ರಾತ್ರಿ 9 ಗಂಟೆ ಸುಮಾರಿಗೆ ಮಹೇಶ ಎಂಬ ವ್ಯಕ್ತಿ ದೂರವಾಣಿ ಕರೆ ಮಾಡಿ ಕಲಬುರಗಿ ಹೊರವಲಯದ ನಂದೂರು ಕೈಗಾರಿಕಾ ವಸಾಹತು ಪ್ರದೇಶದ ದಾಲ್‌ಮಿಲ್ ಒಂದರಲ್ಲಿ ಸರ್ಕಾರದ ವಿವಿಧ ಯೋಜನೆಯಡಿ ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಸೇರಿದ ಅಕ್ಕಿ ಅಕ್ರಮ ದಾಸ್ತಾನು ಮಾಡಿರುವುದಾಗಿ ಮಾಹಿತಿ ನೀಡಿದ ತಕ್ಷಣವೇ ಇಲಾಖೆಯ ಆಹಾರ ನಿರೀಕ್ಷಕರಿಗೆ ಈ ಕುರಿತು ಸ್ಥಳಕ್ಕೆ ಭೇಟಿ ನೀಡುವಂತೆ ಸೂಚನೆ ನೀಡಲಾಗಿತ್ತು.

ಅದರಂತೆ ಆಹಾರ ನಿರೀಕ್ಷಕರು ವಿಶ್ವವಿದ್ಯಾಲಯ ಪೊಲೀಸ್ ಠಾಣೆಯ ಪಿ.ಎಸ್.ಐ ಹಾಗೂ ಇತರೆ ಪೊಲೀಸ್ ಸಿಬ್ಬಂದಿಯವರೊಂದಿಗೆ ನಂದೂರು ಕೈಗಾರಿಕಾ ವಸಾಹತು ಪ್ರದೇಶದಲ್ಲಿನ ಬಸವರಾಜ ವಿ.ಪಾಟೀಲ ಅವರಿಗೆ ಸೇರಿದ ನ್ಯಾಷನಲ್ ಪಲ್ಸಸ್ ಇಂಡಸ್ಟ್ರೀಸ್ ದಾಲ್ ಮಿಲ್ ಗೆ ಭೇಟಿ ನೀಡಿ ಪರಿಶೀಲಿಸಿದಾಗ ಅಂದಾಜು 280 ಕ್ವಿಂ. ತೊಗರಿ ಬೇಳೆ, ಅಂದಾಜು 50 ಕೆ.ಜಿ. ತೂಕವುಳ್ಳ 15 ಪ್ಲಾಸ್ಟಿಕ್ ಚೀಲಗಳು (7.50 ಕ್ವಿಂಟಾಲ್) ಅಕ್ಕಿ ಮಾತ್ರ ದಾಸ್ತಾನಿರುವುದು ಕಂಡುಬಂದಿದೆ.

ಈ ಕುರಿತು ಬಸವರಾಜ ವಿ. ಪಾಟೀಲ್ ರವರನ್ನು ವಿಚಾರಿಸಿದಾಗ ತಮ್ಮ ಪತ್ನಿ ನಿರ್ಮಲಾ ಹಾಗೂ ಸೊಸೆ ಸಂಗೀತಾ ಅವರ ಒಡೆತನದ ಶ್ರೀ ಶಿವಪಾರ್ವತಿ ಇಂಡಸ್ಟ್ರೀಸ್ ಸಾರ್ವಜನಿಕ ವಿತರಣಾ ಪದ್ಧತಿಯಡಿ ಕಲಬುರಗಿ ಜಿಲ್ಲೆಗೆ ಅಕ್ಕಿ ಸರಬರಾಜು ಮಾಡಲು ಕೇಂದ್ರೀಯ ಭಂಢಾರ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದು, ಅದರಂತೆ ಮುಕ್ತ ಮಾರುಕಟ್ಟೆಯ ಏಜೆನ್ಸಿಗಳಾದ ತೆಲಂಗಾಣಾದ ರಂಗಾರೆಡ್ಡಿ ಜಿಲ್ಲೆಯ ಹರಿಕೇಶ್ ಎಂಟರ್‌ಪ್ರೈಸಸ್, ಬೀದರಿನ ಎಂ.ಕೆ. ಟ್ರೇಡಿಂಗ್ ಕಂಪನಿ, ಹುಮನಾಬಾದಿನ ಜೈ ಭವಾನಿ ಟ್ರೇಡರ್ಸ್ ಹಾಗೂ ಮಹಾರಾಷ್ಟ್ರದ ಶ್ರೀ ಗಜಾನನ ಆಗ್ರೋ ಏಜೆನ್ಸಿಸ್ ಸೇರಿದಂತೆ ಇನ್ನಿತರೆ ಏಜೆನ್ಸಿಗಳಿಂದ ಸುಮಾರು 22,629 ಕ್ವಿಂಟಾಲ್ ಅಕ್ಕಿ ಖರೀದಿ ಮಾಡಲಾಗಿದೆ ಎಂದು ತಿಳಿಸಿ, ಖರೀದಿಗೆ ಸಂಬಂಧಿಸಿದ ದಾಖಲೆಗಳು ಹಾಗೂ ಕೇಂದ್ರೀಯ ಭಂಡಾರ ಸಂಸ್ಥೆಯೊಂದಿಗೆ ಮಾಡಿಕೊಂಡ ಒಡಂಬಡಿಕೆ ಪ್ರತಿ, ದಾಲ್ ಮಿಲ್ ಮಾಲೀಕತ್ವಕ್ಕೆ ಸಂಬಂಧಿಸಿದ ದಾಖಲೆಗಳು ಹಾಗೂ ಅಕ್ಕಿ ಸರಬರಾಜು ಮಾಡಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ತನಿಖಾ ಸಮಯದಲ್ಲಿ ಹಾಜರು ಪಡಿಸಿರುವ ಕಾರಣ ಇದು ಅಕ್ರಮ ಅಕ್ಕಿ ಅಲ್ಲ ಎಂಬ ನಿರ್ಧಾರಕ್ಕೆ ಬರಲಾಗಿದೆ.

ಆದರೆ ಮಣಿಕಂಠ ರಾಠೋಡ ಎಂಬುವವರು ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿ ಅಕ್ರಮವಾಗಿ ಅಕ್ಕಿ ದಾಸ್ತಾನು ಬಗ್ಗೆ ಮಾಹಿತಿ ನೀಡಿದ್ದಾಗ್ಯೂ ಆಹಾರ ಇಲಾಖೆ ಯಾವುದೇ ಕ್ರಮಕೈಗೊಂಡಿರುವುದಿಲ್ಲ ಹಾಗೂ ಅಕ್ಕಿ ಬಿಡುವಂತೆ ವೈದ್ಯಕೀಯ ಶಿಕ್ಷಣ ಸಚಿವರ ಆಪ್ತ ಸಹಾಯಕರು ಕರೆ ಮಾಡಿದ್ದಾರೆಂಬ ಹೇಳಿಕೆ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿದ್ದು, ಅದು ಸತ್ಯಕ್ಕೆ ದೂರವಾಗಿದೆ. ಸಚಿವರ ಅಪ್ತ ಸಹಾಯಕರಾಗಲಿ ಅಥವಾ ಇತರೆ ಯಾವುದೇ ಅಧಿಕಾರಿಗಳು ಕರೆ ಮಾಡಿಲ್ಲ ಹಾಗೂ ಇಲಾಖೆಯಿಂದ ಯಾವುದೇ ಲೋಪವಾಗಿಲ್ಲ ಎಂದು ಅವರು ಸ್ಪಷ್ಟನೆ ಪಡಿಸಿದ್ದಾರೆ.

## ಹಲ್ಲೆ ಪ್ರಕರಣ ಮುಚ್ಚಿಹಾಕಲು ಸಿಪಿಐ ನಟರಾಜ್ ಲಾಡೆ ಖಾತೆಗೆ 11.50 ಲಕ್ಷ ರೂ.ಗಳ ಅಕ್ರಮ ಹಣ ವರ್ಗಾವಣೆ: ಮಣಿಕಂಠ್ ರಾಠೋಡ್ ಆರೋಪ

**ಕಲಬುರ್ಗಿ, ಅ.8–** ತಮ್ಮ ಮೇಲೆ ಆದ ಹಲ್ಲೆ ಪ್ರಕರಣವನ್ನು ಮುಚ್ಚಿ ಹಾಕಲು ತನಿಖಾಧಿಕಾರಿ ಶಹಾಬಾದ್ ಪೋಲಿ ಸ್ ಠಾಣೆಯ ಸಿಪಿಐ ನಟರಾಜ್ ಲಾಡೆ ಅವರ ಖಾತೆಗೆ ಸುಮಾರು ಹನ್ನೊಂದುವರೆ ಲಕ್ಷ ರೂ.ಗಳು ಅಕ್ರಮವಾಗಿ ವರ್ಗಾವಣೆ ಆಗಿದೆ ಎಂದು ಬಿಜೆಪಿ ಮುಖಂಡ ಮಣಿ ಕಂಠ್ ರಾಠೋಡ್ ಅವರು ಗಂಭೀರ ಆರೋಪ ಮಾಡಿದರು. ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 2023ರ ನವೆಂಬರ್ 19ರಂದು ತಮ್ಮ ಮೇಲೆ ಮಾರಣಾಂತಿಕ ಹಲ್ಲೆ ಆಗಿರುವ ಕುರಿತು ದೂರು ಸಲ್ಲಿಸಿದ್ದು, ತನಿಖಾಧಿಕಾರಿ ಸಿಪಿಐ ನಟರಾಜ್ ಲಾಡೆ ಅವರು ಪ್ರಕರಣವನ್ನು ಸರಿಯಾಗಿ ತನಿಖೆ ಮಾಡದೇ ನನಗೆ ಆರೋಪಿಯ ನ್ನಾಗಿಸಿ ಇಡೀ ಪ್ರಕರಣ ಮುಚ್ಚಿ ಹಾಕಲು ಯತ್ನಿಸಿದರು. ಹಾಗಾಗಿ ಆ ಪ್ರಕರಣದಲ್ಲಿ ಬಿ ವರದಿ ಸಲ್ಲಿಸಲು ಸಿಪಿಐ ಅವರು ಅಕ್ರಮವಾಗಿ ಹಣವನ್ನು ವರ್ಗಾವಣೆ ಮಾಡಿಸಿಕೊಂಡಿದ್ದಾರೆ ಎಂದು ದೂರಿದರು.

ಸಿಪಿಐ ನಟರಾಜ್ ಲಾಡೆ ಅವರಿಗೆ ಕಳೆದ ಜನವರಿ 1ರಂದು 15000ರೂ.ಗಳು, ಜನವರಿ 3ರಂದು 9,500ರೂ.ಗಳು, ಜನವರಿ 4ರಂದು 1,178.82ರೂ.ಗಳು, ಜನವರಿ 5ರಂದು 21,500ರೂ.ಗಳು ಸೇರಿ ದಂತೆ ಒಟ್ಟು 21.50 ಲಕ್ಷ ರೂ.ಗಳು ಅಕ್ರಮ ಹಣ ವರ್ಗಾವಣೆ ಆಗಿರುವ ಕುರಿತು ಹಲವು ದಾಖಲೆಗಳನ್ನು ಅವರು ಪ್ರದರ್ಶಿಸಿದರು.

ಹನ್ನೊಂದುವರೆ ಲಕ್ಷ ಖಾತೆ ಯಲ್ಲಿ ರೀಸಿವ್ ಮಾಡಿದ್ದಾರೆ. ಬಿ ವರದಿ ಸಲ್ಲಿಸುವುದಕ್ಕೆ ಹಣ ಸ್ವೀಕರಿ ಸಿರುವ ಕುರಿತು ನಮಗ ಬಲವಾದ ಅನುಮಾನವಿದೆ. ಹಾಗಾಗಿ ಸಿಪಿಐ ನಟರಾಜ್ ಲಾಡೆ ಅವರು ಸರ್ಕಾರಿ ನೌಕರಿಗೆ ಸೇರಿದ ನಂತರ ಹಲವಾರು ಅಕ್ರಮಗಳನ್ನು ಮಾಡಿದ್ದು, ಆ ಕುರಿತು ತನಿಖೆ ಕೈಗೊಳ್ಳಬೇಕು. ಅವರಿಗೆ ಇರುವ ಆದಾಯ ಹಾಗೂ ಅವರು ಗಳಿಸಿರುವ ಆಸ್ತಿಪಾಸ್ತಿ ಕುರಿತು ತನಿಖೆಯನ್ನು ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟು ಹೋಗಿದೆ. ಪೋಲಿಸರು ಕರ್ತವ್ಯ ನೀಡದೇ ಜನರಿಗೆ ಹೆದರಿಸುವ ಕೆಲಸ ಮುಂದು ವರೆಸಿದ್ದಾರೆ. ಅಂಥವರ ಮೇಲೆ ಕ್ರಮ ಕೈಗೊಳ್ಳಬೇಕು. ಅಮಾನತ್ತು, ವಜಾಗೊಳಿಸಬೇಕು. ಎಲ್ಲ ಪೋಲಿಸ್ ಹಿರಿಯ ಅಧಿಕಾರಿಗಳ ಕುರಿತು ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಸಭೆ ಮಾಡಿ, ಅಕ್ರಮ, ಭ್ರಷ್ಟಾಚಾರ ಮಾಡಿದ ಅಧಿಕಾರಿಗಳು ಸ್ವಯಂ ಆಸ್ತಿ ಘೋಷಣೆ ಮಾಡುವ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದ ಅವರು, ಇಲ್ಲವಾದಲ್ಲಿ ಮುಂಬರುವ ದಿನಗಳಲ್ಲಿ ಈ ಎಲ್ಲ ಅಧಿಕಾರಿಗಳು ಬಹಳ ಪಶ್ಚಾತಾಪ ಪಡಲಿದ್ದಾರೆ ಎಂದು ಎಚ್ಚರಿಸಿದರು.

ಹಿಂದೆ ಅಪಘಾತ ಆದ ನಂತರ ಎಂಟ್ಹತ್ತು ಜನ ಪೋಲಿಸರು ಬಂದು ನನಗೆ ನಗರದಲ್ಲಿನ ನಿವಾಸದಲ್ಲಿ ಬಂಧಿಸಿದರು. ಫರತಾಬಾದ್, ಚಿತ್ತಾಪುರ, ಚಿತ್ತಾಪುರ ತಹಸಿಲ್ ಕಚೇರಿಗೆ ಒಯ್ಯುತ್ತಾರೆ. ಸಂಜೆ ನಾಲ್ಕು ಗಂಟೆಗೆ ಪ್ರಕರಣ ದಾಖಲಿಸಲಾಗಿದೆ. ಎಫ್‌ಐಆರ್ ದಾಖಲಿ ಸದೇ ಬಂಧಿಸು ತ್ತಾರೆ. ರಕ್ತ ಪರೀಕ್ಷೆ ಮಾಡುತ್ತಾರೆ. ಅದನ್ನು ಪಂಚನಾಮೆ ಮಾಡಿಸಿ ಆ ರಕ್ತದ ಮೂಲಕ ಅಪಘಾತ ಪ್ರಕರಣ ಮುಚ್ಚಿ ಹಾಕಲು ಪ್ರಯತ್ನಿಸಿದರು ಎಂದು ಅವರು ದೂರಿದರು.

ನಾನು ಈ ಕುರಿತು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗ, ರಾಜ್ಯ ಗೃಹ ಕಾರ್ಯದರ್ಶಿಗಳಿಗೆ, ರಾಜ್ಯ ಪೋಲಿಸ್ ಮಹಾನಿರ್ದೇ ಶಕರಿಗೆ ದೂರು ಸಲ್ಲಿಸಿರುವೆ ಎಂದು ಅವರು ಹೇಳಿದರು.

## ಕಾಮಗಾರಿ ಹೆಸರಿನಲ್ಲಿ ಅಕ್ರಮ: ತನಿಖೆಗೆ ಒತ್ತಾಯ

ಬೋರೆಯ್ಯ ತನ್ನ ಅಪ್ಪನ ಹೆಸರಿನಲ್ಲಿ ಕೋಟ್ಯಾಂತರ ಆರ್ಥಿಕ ನಷ್ಟಕ್ಕೆ ಕಾರಣವಾಗಿದ್ದಾರೆ. ಕೊಪ್ಪಳ ಮತ್ತು ಬಳ್ಳಾರಿ ವಿಭಾಗಗಳಲ್ಲಿ ಕಾಮಗಾರಿ ನಿರ್ವಹಿಸದೇ ಮೂರನೇ ತಂಡದ ವರದಿ ಪಡೆಯದೇ 68 ಕೋಟಿ ರೂ ಹಣವನ್ನು ಬಿಲ್ ಪಾವತಿಸಿದ್ದಾರೆ. 2023 ರಲ್ಲಿ ನಿಗಮದಿಂದಲೇ ಆಂತರಿಕ ತನಿಖೆ ಕೈಗೊಳ್ಳಲಾಗಿದ್ದು, ಕೊಪ್ಪಳ ಜಿಲ್ಲೆಯ ಕುಕನೂರು, ಯಲಬುರ್ಗ ತಾಲೂಕಿನ 13 ಗ್ರಾಮಗಳಲ್ಲಿ 3 ಕೋಟಿ ರೂ ಪ್ರತಿಗ್ರಾಮಕ್ಕೆ ರಸ್ತೆ ನಿರ್ಮಾಣದ ಹೆಸರಿನಲ್ಲಿ 40 ಕೋಟಿ ರೂ ಹಣ ಮಂಜೂರು ಮಾಡಲಾಗಿತ್ತು. ಗ್ರಾಮಗಳ ರಸ್ತೆಗೆ ನಿವೇಶನ, ಜಮೀನು ಇಲ್ಲದೇ ಇದ್ದರೂ 40 ಕೋಟಿ ರೂ ಅನುದಾನ ದುರ್ಬಳಕೆ ಮಾಡಿಕೊಂಡಿರುವದು, ಬೀದರ ,ತೆಲ್ಕೂರು, ಯಾದಗಿರಿ, ಕಲ್ಬುರ್ಗಿ,, ವಿಜಯಪುರ ಸೇರಿದಂತೆ ಕಾಮಗಾರಿಗಳ ಗುಣಮಟ್ಟವಾಗಿ ನಿರ್ವಹಿಸದೇ ಇರುವ ಕುರಿತು ಆಕ್ಷೇಪಣೆ ಸಲ್ಲಿಸಿದ್ದರೂ ಕ್ರಮವಾಗಿಲ್ಲ. 19 ಬಾರಿ ಲೋಕಾಯುಕ್ತರು ಸೇರಿದಂತೆ ಸಂಬಂಧಿಸಿದ ಇಲಾಖೆಗಳಿಗೆ ದೂರು ನೀಡಲಾಗಿದೆ. ಆದರೂ ಕ್ರಮವಾಗಿಲ್ಲ. ಪ್ರಭಾವ ಬಳಸಿ ಬ್ರಹ್ಮಾಂಡ ಬ್ರಷ್ಟಚಾರ ನಡೆಸಿದ್ದ ಕೂಡಲೇ ಕ್ರಮಕ್ಕೆಮುಂದಾಗುವಂತೆ ಮುಖ್ಯಮಂತ್ರಿ, ಸಾರಿಗೆ ಸಚಿವರು, ಲೋಕಾಯುಕ್ತರಿಗೆ ದೂರು ನೀಡುವದಾಗಿ ಹೇಳಿದರು.

## ಭೂ ಸ್ವಾಧೀನ ಕಾಯ್ದೆ ತಿದ್ದುಪಡಿಗೊಳಿಸಲಿ- ಜಗದೀಶ

ನ್ಯಾಯಾಲಯಕ್ಕೆ ಅಧಿಕಾರ ನೀಡುವ ಮೂಲಕ ಆರು ತಿಂಗಳಲ್ಲಿಯೇ ಪ್ರಕರಣಗಳ ಇತ್ಯರ್ಥಕ್ಕೆ ಷರತ್ತು ವಿಧಿಸಿ ಕಾಯ್ದೆ ತಿದ್ದುಪಡಿಮಾಡಬೇಕಿದೆ. ಅನೇಕ ಸಂದರ್ಬದಲ್ಲಿ ಸಹಾಯಕ ಆಯುಕ್ತರು ಸಹ ಆಮಿಷೆಗೆ ಒಳಗಾಗಿ ಅಧಿಕಾರ ಇಲ್ಲದೇಇದ್ದರೂ ಆದೇಶ ನೀಡಿರುವ ನಿದರ್ಶನಗಳಿವೆ. ಸಾರ್ವಜನಿಕರು ಭೂಮಿ ಖರೀದಿ ,ಮಾರಾಟಕ್ಕೆ ಸಂಬಂಧವೇ ಇಲ್ಲದವರು ಆಕ್ಷೇಪಣೆಗಳನ್ನು ಸಲ್ಲಿಸಿ ವಿಳಂಭಕ್ಕೆ ಕಾರಣವಾಗುತ್ತಿರುವದನ್ನು ತ್ವರಿತವಾಗಿ ತಡೆಯಬೇಕಿದೆ. ಈ ಕುರಿತು ಮುಖ್ಯಮಂತ್ರಿಗಳು, ಕಾನೂನು ಸಚಿವರು, ಪ್ರತಿಪಕ್ಷದ ನಾಯಕರು ಸೇರಿದಂತೆ ಇಲಾಖೆ ಸಚಿವರಿಗೆ ಮನವಿ ಸಲ್ಲಿಸಲಾಗಿದೆ. ಸರ್ಕಾರ ಆಧ್ಯತೆಯಾಗಿ ಪರಿಗಣಿಸಿ ವಿಳಂಬತೆಯನ್ನು ದೂರಮಾಡಬೇಕೆಂದರು. ಈ ಸಂದರ್ಬದಲ್ಲಿ ಕೆ.ಪ್ರಲ್ಹಾದರಾವ್, ಎಚ್.ದೊಡ್ಡಪ್ಪ, ರಾಜೇಶ, ಗೌರೀಶ ಉಪಸ್ಥಿತರಿದ್ದರು.

# ಮೈಸೂರು ಮಾದರಿಯಲ್ಲಿ 12ನೇ ದಸರಾ ದರ್ಬಾರಕ್ಕೆ ಶ್ರೀನಿವಾಸ್ ಸರಡಗಿ ಮಹಾಲಕ್ಷ್ಮೀ ಶಕ್ತಿ ಪೀಠ ಸರ್ವ ಸಜ್ಜು





**ಕಲಬುರ್ಗಿ, ಅ.8-** ತಾಲ್ಲೂಕಿನ ಶ್ರೀನಿವಾಸ್ ಸರಡಗಿ ಗ್ರಾಮದ ಮಹಾಕ್ಷ್ಮೀ ಶಕ್ತಿ ಪೀಠದ 12ನೇ ದಸರಾ ದರ್ಬಾರದ ಪ್ರಯುಕ್ತ 2ನೇ ಮೈಸೂರು ಮಾದರಿಯಲ್ಲಿ ಜಂಬೂ ಸವಾರಿ ಭವ್ಯ ಮೆರವಣಿಗೆ ಹಾಗೂ ತುಲಾಭಾರ ಮತ್ತು ಭಾವೈಕ್ಯ ಧರ್ಮ ಸಭೆ ಅಕ್ಟೋಬರ್ 12ರಂದು ವಿವಿಧ ಧಾರ್ಮಿಕ ಕಾರ್ಯಕ್ರಮ ಗಳು ಡಾ. ಅಪ್ಪಾರಾವ್ ದೇವಿ ಮುತ್ಯಾ ಅವರ ಅಪ್ಪಣೆಯ ಮೇರೆಗೆ ಜರಗುವವು ಎಂದು ಶಕ್ತಿ ಪೀಠದ ಕಾರ್ಯದರ್ಶಿ ವಿಶ್ವನಾಥ್ ಪಾಟೀಲ್ ಬೇನೂರ್ ಅವರು ತಿಳಿಸಿದ್ದಾರೆ.

ಅಕ್ಟೋಬರ್ 12ರಂದು ವಿಜಯದಶಮಿ ಶನಿವಾರ ಬೆಳಿಗ್ಗೆ 6 ಗಂಟೆಗೆ ದೇವಿಯ ಮಹಾಭಿಷೇಕ ಮಹಾಅಲಂಕಾರ, ಮಹಾನೈವಿದ್ಯ ಮಧ್ಯಾಹ್ನ 12.30 ಗಂಟೆಗೆ ಜಂಬೂ ಸವಾರಿ ಭವ್ಯ ಮೆರವಣಿಗೆಯನ್ನು ಗ್ರಾಮೀಣ ವಿಭಾಗದ ಡಿವೈಎಸ್‌ಪಿ ಡಿ.ಜಿ. ರಾಜಣ್ಣ ಹಾಗೂ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯ ಪೊಲೀಸ್ ಸರ್ಕಲ್ ಇನ್ಸಪೆಕ್ಟರ್ ಸುಶೀಲ ಕುಮಾರ್ ಅವರು ಉದ್ಘಾಟಿಸುವರು. ನಂತರ ಮೈಸೂರು ಮಾದರಿಯಲ್ಲಿ ಗ್ರಾಮದ ಪ್ರಮುಖ ರಾಜ ಬೀದಿಯಿಂದ ಶ್ರೀ ದೇವಿಯ ಶಕ್ತಿಪೀಠದವರೆಗೆ ಆನೆ ಅಂಬಾರಿ ಮೇಲೆ ಜಂಬೂ ಸವಾರಿ ಹಾಗೂ ಈ ನಾಡಿನ ಅನೇಕ ನುರಿತ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರಗಲಿವೆ ಎಂದು ಅವರು ಹೇಳಿಕೆಯಲ್ಲಿ ವಿವರಿಸಿದ್ದಾರೆ.

ಸಾಯಂಕಾಲ 5. 45 ಗಂಟೆಗೆ ಪರೇಡ್ ಕವಾಯತ್ ಮುಖಾಂತರ ಬನ್ನಿ ಮುಡಿಯುವ ಕಾರ್ಯಕ್ರಮ. ಸಾಯಂಕಾಲ 6 ಗಂಟೆಗೆ ಭಾವೈಕ್ಯ ಧರ್ಮಸಭೆ ಜರುಗವುದು. ವಿವಿಧ ಕ್ಷೇತ್ರದಲ್ಲಿ ಶ್ರಮಿಸಿದ ಗಣ್ಯರಿಗೆ ಸುಕ್ಷೇತ್ರ ಶ್ರೀನಿವಾಸ ಸರಡಗಿ ಶ್ರೀ ಶಕ್ತಿಪೀಠದ ವತಿಯಿಂದ ಪ್ರಶಸ್ತಿ ಪ್ರದಾನದೊಂದಿಗೆ ಗೌರವಿಸಲಾಗುವದು. ಪೂಜ್ಯರಿಗೆ ತುಲಾಭಾರ ಸೇವೆ ಜರುಗುವುದು. ಭಾವೈಕ್ಯ ಧರ್ಮ ಸಭೆ ಸಾ. 6 ಗಂಟೆಗೆ ಶ್ರೀ ಸರಡಗಿ ಅನ್ನಪೂರ್ಣೇಶ್ವರಿ ಬಸವಕಲ್ಯಾಣ ಸಂಸ್ಥಾನ ಮಕ್ಕಳಿಂದ ಹಾಗೂ ಶ್ರೀ ಸರಡಗಿ ಶಕ್ತಿ ಇಂಗ್ಲೀಷ್ ಮಿಡಿಯಮ್ ಸ್ಕೂಲ್ ಕಲಬುರಗಿ ರೂಪಕ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ. ಮುಗಳನಾಗಾಂವ್ ಕಟ್ಟಿಮನಿ ಹಿರೇಮಠದ ಅಭಿನವ ಸಿದ್ಧಲಿಂಗ ಶಿವಾಚಾರ್ಯರು ಸಾನಿಧ್ಯ ವಹಿಸುವರು.

ಭರತನೂರ್ ವಿರಕ್ತಮಠದ ಚಿಕ್ಕಗುರುನಂಜೇಶ್ವರ್ ಮಹಾಸ್ವಾಮಿಗಳು, ವೀರಭದ್ರ ಶಿವಾಚಾರ್ಯರು ಉಪಸ್ಥಿತರಿರುವರು. ರಾಜ್ಯದ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ಪಾಟೀಲ್ ಅವರು ಕಾರ್ಯಕ್ರಮ ಉದ್ಘಾಟಿಸುವರು ಎಂದು ಅವರು ತಿಳಿಸಿದ್ದಾರೆ.

ಶಾಸಕ ಬಸವರಾಜ್ ಮತ್ತಿಮೂಡ್ ಅವರು ಅಧ್ಯಕ್ಷತೆ ವಹಿಸುವರು. ಶಾಸಕ ಅಲ್ಲಮಪ್ರಭು ಪಾಟೀಲ್, ವಿಧಾನ ಪರಿಷತ್ ಸದಸ್ಯ ತಿಪ್ಪಣಪ್ಪ ಕಮಕನೂರ್, ಮಾಜಿ ಶಾಸಕ ದತ್ತಾತ್ರೇಯ್ ಸಿ. ಪಾಟೀಲ್ ರೇವೂರ್, ಬಿಜೆಪಿ ನಗರಾಧ್ಯಕ್ಷ ಚಂದು ಪಾಟೀಲ್, ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ರಾಜು ಲೆಂಗಟಿ, ಕಾಂಗ್ರೆಸ್ ಮುಖಂಡ ನೀಲಕಂಠ ರಾವ್ ಮೂಲಗೆ, ಉದ್ಯಮಿ ಯುವರಾಜ್ ಚಿಂಚೋಳಿ, ಬಿಜೆಪಿ ಮುಖಂಡ ಪ್ರದೀಪ್ ವಾತಡೆ, ಜಿಲ್ಲಾ ವೀರಶೈವ ಸಮಾಜದ ಅಧ್ಯಕ್ಷ ಅರುಣಕುಮಾರ್ ಪಾಟೀಲ್, ಮಾಜಿ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಸಂಗಮೇಶ್ ನಾಗನಳ್ಳಿ, ಆಹಾರಧಾನ್ಯ ಬೀಜ ವ್ಯಾಪಾರಿಗಳ ಅಧ್ಯಕ್ಷ ಸಂತೋಷ್ ಲಂಗಾರ್, ಉದ್ಯಮಿ ಸುನೀಲ್ ಪಾಟೀಲ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಅನು ಸೂಬಾಯಿ ರಾಠೋಡ್, ದಿವ್ಯಾ ಹಾಗರಗಿ, ದಾಲ್ ಇಂಡಸ್ಟ್ರೀಜ್‌ನ್ ರವಿ ಪಾಟೀಲ್ ಸರಡಗಿ, ಮಾಜಿ ಎಪಿಎಂಸಿ ಅಧ್ಯಕ್ಷ ಶಾಂತಕುಮಾರ್ ಬಿರಾದಾರ್, ಬಿಜೆಪಿ ಮುಖಂಡ ವಿನೋದ್ ಪಾಟೀಲ್, ಕಾಂಗ್ರೆಸ್ ಮುಖಂಡ ಆನಂದ್ ಪಾಟೀಲ್ ಮುಂತಾದವರು ಮುಖ್ಯ ಅತಿಥಿ ಗಳಾಗಿ ಆಗಮಿಸುವರು. ಮದ್ದು ಸುಡುವ ಕಾರ್ಯಕ್ರಮವನ್ನು ಸೋಲಾಪುರ ಸದ್ಭಕ್ತರಿಂದ ಜರುಗುವುದು. ಶ್ರೀ ದೇವಿಯ ಪವಿತ್ರ ಕಾಯರ್ಕ್ರಮದಲ್ಲಿ ಕರ್ನಾಟಕ, ಆಂಧ್ರ ಪ್ರದೇಶ, ಮಹಾರಾಷ್ಟ್ರ, ಆಂಧ್ರ ಪ್ರದೇಶ ಹಾಗೂ ಗ್ರಾಮಸ್ಥರು, ಸಕಲ ಸದ್ಭಕ್ತರು ಆಗಮಿಸಿ ದೇವಿಯ ಕೃಪೆಗೆ ಪಾತ್ರರಾಗಬೇಕೆಂದು ಅವರು ಕೋರಿದ್ದಾರೆ.

# ಕುಖ್ಯಾತ ಅಂತರ್ ಜಿಲ್ಲಾ ಕಳ್ಳರ ಬಂಧನ: 14.70 ಲಕ್ಷ ರೂ.ಗಳ ಮೌಲ್ಯದ ಚಿನ್ನಾಭರಣ ಜಪ್ತಿ



**ಕಲಬುರ್ಗಿ,ಅ.8-** ಇಬ್ಬರು ಕುಖ್ಯಾತ ಅಂತರ್ ಜಿಲ್ಲಾ ಕಳ್ಳರನ್ನು ಬಂಧಿಸಿ ಅವರಿಂದ ಸುಮಾರು 14.70 ಲಕ್ಷ ರೂ.ಗಳ ಮೌಲ್ಯದ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ ಎಂದು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು ಅವರು ಹೇಳಿದರು.

ನಗರದ ಪೋಲಿಸ್ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮರತೂರಿನಲ್ಲಿ ಮನಯೊಂದರ ಕಳ್ಳತನ ಪ್ರಕರಣವನ್ನು ತನಿಖೆ ಕೈಗೊಂಡ ಸಂದರ್ಭದಲ್ಲಿ ಇಬ್ಬರು ಕಳ್ಳರನ್ನು ಬಂಧಿಸಲಾಗಿದೆ. ಮೂಲತ: ಜೇವರ್ಗಿ ತಾಲ್ಲೂಕಿನ ಗಂವ್ಹಾರ್ ಗ್ರಾಮದ ನಿವಾಸಿ, ಹಾಲಿ ವಸ್ತಿ ವಾಡಿಯ ಫಿಲ್ಕಂ ಪ್ರದೇಶದ ರಫಿಕ್ ತಂದೆ ಅಬ್ದುಲ್ ಗನಿ (33) ಹಾಗೂ ನಗರದ ರೈಲು ನಿಲ್ದಾಣ ಮಾರ್ಗದಲ್ಲಿನ ಯತಿಮಖಾನ್ ಕಂಪೌಂಡ್ ಪ್ರದೇಶದ ನಿವಾಸಿ ಮೊಹ್ಮದ್ ಮಾಜಿದ್ ತಂದೆ ಖಾಜಾ ಮೈನೂದ್ದೀನ್ ಪೋಲಿಸ್ ಪಟೇಲ್ (34) ಅವರನ್ನು ಬಂಧಿಸಲಾಗಿದೆ ಎಂದರು.

ಬಂಧಿತರು ಒಟ್ಟು 11 ಮನೆಗಳ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದನ್ನು ಒಪ್ಪಿಕೊಂಡಿದ್ದಾರೆ. ಹೀಗಾಗಿ ಬಂಧಿತರಿಂದ ಒಟ್ಟು 170 ಗ್ರಾಮ್ ತೂಕದ ಬಂಗಾರದ ಆಭರಣಗಳು, 280 ಗ್ರಾಮ್ ತೂಕದ ಬೆಳ್ಳಿಯ ಆಭರಣಗಳು, ನಗದು ಹಣ ಒಂದು ಲಕ್ಷ ಐದು ಸಾವಿರ ರೂ.ಗಳು, 45000ರೂ.ಗಳ ಮೌಲ್ಯದ ದ್ವಿಚಕ್ರ ವಾಹನಗಳು ಸೇರಿ 14.70 ಲಕ್ಷ ರೂ.ಗಳ ಮೌಲ್ಯದ ಸ್ವತ್ತು ವಶಪಡಿಸಿ ಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಶಹಾಬಾದ್ ತಾಲ್ಲೂಕಿನ ಮರತೂರಿನಲ್ಲಿ ಅಬ್ದುಲ್ ರಜಾಕ್ ತಂದೆ ಉಸ್ಮಾನಸಾಬ್ ಬಾಗೋಡಿ ಅವರ ಮನೆಯಲ್ಲಿ ಕಳ್ಳತನವಾಗಿತ್ತು. 50,000ರೂ.ಗಳ ಮೌಲ್ಯದ ತಲಾ ಐದು ಗ್ರಾಮದ ಎರಡು ಬಂಗಾರದ ಉಂಗುರುಗಳು, 35000ರೂ.ಗಳ ಮೌಲ್ಯದ ಒಂದು ಬಂಗಾರದ ಮಂಗಳಸೂತ್ರ, 35000ರೂ.ಗಳ ಮೌಲ್ಯದ ಒಂದು ಬೋರಮಳಾ 60000ರೂ.ಗಳ ಮೌಲ್ಯದ ಎರಡು ಬಂಗಾರದ ಬಳೆಗಳು, 15000ರೂ.ಗಳ ಮೌಲ್ಯದ ಬೆಳ್ಳಿಯ ಕಾಲು ಚೈನ್, 1800ರೂ.ಗಳ ಮೌಲ್ಯದ ಬೆಳ್ಳಿಯ ಕಾಲುಂಗುರ, 1800ರೂ.ಗಳ ಮೌಲ್ಯದ ಬೆಳ್ಳಿಯ ಉಂಗುರುಗಳು, ಸೇರಿ 3.95 ಲಕ್ಷ ರೂ.ಗಳ ಮೌಲ್ಯದ ಸ್ವತ್ತು ಕಳ್ಳತನವಾಗಿರುವ ಕುರಿತು ದೂರು ಸಲ್ಲಿಸಿದ್ದರು. ಆ ಪ್ರಕರಣದಲ್ಲಿ ಬಂಧಿತ ಆರೋಪಿಗಳು ಭಾಗಿಯಾಗಿರುವ ಕುರಿತು ತನಿಖೆಯ ವೇಳೆ ಒಪ್ಪಿಕೊಂಡಿದ್ದಾರೆ ಎಂದು ಅವರು ತಿಳಿಸಿದರು.

ಅಷ್ಟೇ ಅಲ್ಲದೇ ಕಳ್ಳರು ಶಹಾಬಾದ್, ವಾಡಿ, ಚಿತ್ತಾಪುರ, ಕಾಳಗಿ, ಮಾಡಬೂಳ್ ಪೋಲಿಸ್ ಠಾಣೆಗಳ ವ್ಯಾಪ್ತಿಯಲ್ಲಿ ಕಳ್ಳತನ ಮಾಡಿರುವ ಕುರಿತು ತನಿಖೆಯ ವೇಳೆ ಬಾಯಿ ಬಿಟ್ಟಿದ್ದಾರೆ ಎಂದು ಅವರು ಹೇಳಿದ ಅವರು, ಕಾರ್ಯಾಚರಣೆ ಯಲ್ಲಿ ಸಿಪಿಐ ಚಂದ್ರಶೇಖರ್ ತಿಗಡಿ, ಪಿಎಸ್‌ಐ ನಟರಾಜ್ ಲಾಡೆ ಅವರ ನೇತೃತ್ವದಲ್ಲಿ ಎಎಸ್‌ಐಗಳಾದ ತಿರುಮಲೇಶ್ ಗುಂಡಪ್ಪ, ಲಾಲ್ ಅಹ್ಮದ್, ಮಲ್ಲಿಕಾರ್ಜುನ್ ಉಪಳಪ್ಪಾ, ಸಿಬ್ಬಂದಿಗಳಾದ ರಮಣಯ್ಯ, ರವಿ, ಆರೀಫ್, ಶ್ರೀಕಾಂತ್, ಲಕ್ಷ್ಮಣ್, ಬಸವಲಿಂಗಪ್ಪ, ದೊಡ್ಡಪ್ಪ, ಪಾಷಾ, ವೆಂಕಟೇಶ್, ಭೀಮೇಶ್, ಮಂಜುನಾಥ್ ಅವರು ಪಾಲ್ಗೊಂಡು ಆರೋಪಿಗಳನ್ನು ಬಂಧಿಸಿದರು ಎಂದರು. ಸುದ್ದಿಗೋಷ್ಠಿಯಲ್ಲಿ ಹೆಚ್ಚುವರಿ ವರಿಷ್ಠಾಧಿಕಾರಿ ಶ್ರೀನಿಧಿ, ಪೋಲಿಸ್ ಉಪಾಧೀಕ್ಷಕ ಶಂಕರಗೌಡ ಪಾಟೀಲ್ ಮುಂತಾದವರು ಉಪಸ್ಥಿತರಿದ್ದರು.

# ದುರಾಡಳಿತ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ನ್ಯಾಯಾಲಯಕ್ಕೆ ಪಿಐಎಲ್: ಮಣಿಕಂಠ್ ರಾಠೋಡ್ ಎಚ್ಚರಿಕೆ



**ಕಲಬುರ್ಗಿ, ಅ.8-** ಜಿಲ್ಲೆಯಲ್ಲಿನ ಕೆಲವು ಅಧಿಕಾರಿಗಳು ಸಚಿವರ ಚೇಲಾರಂತೆ ಏಕಪಕ್ಷೀಯವಾಗಿ ಅಧಿಕಾರವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದು, ಕೂಡಲೇ ಅಂತಹ ಅಧಿಕಾರಿಗಳ ವಿರುದ್ಧ ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳದೇ ಹೋದಲ್ಲಿ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ಸಲ್ಲಿಸುವುದಾಗಿ ಬಿಜೆಪಿ ಮುಖಂಡ ಮಣಿಕಂಠ್ ರಾಠೋಡ್ ಅವರು ಎಚ್ಚರಿಸಿದರು.

ನಗರದಲ್ಲಿ ಸೋಮವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಮೇಲೆ ಏಕಪಕ್ಷೀಯ ಸರ್ಕಾರವಾಗಿದೆ. ಅಧಿಕಾರಿಗಳು ರಾಜಕಾರಣಿಗಳ, ಸಚಿವರ ಚೇಲಾಗಳಾಗಿ, ಅವರ ಚಮಚಾ ಆಗಿ, ಮತ್ತು ಅವರು ಬಲಿಕಾ ಬಕರಾ ಆಗುತ್ತಿದ್ದಾರೆ. ಕಳೆದ 2023ರಲ್ಲಿ ಹಲ್ಲೆ ಆಗಿರುವ ಕುರಿತು ಬಿ. ವರದಿ ಹಾಕಿದ್ದಾರೆ. ಆ ತನಿಖಾಧಿಕಾರಿ ನಟರಾಜ್ ಲಾಡೆ ಅವರು ಖಾತೆಯಲ್ಲಿ ಹನ್ನೊಂದುವರೆ ಲಕ್ಷ ಸ್ವೀಕರಿಸಿದ್ದಾರೆ. ಅವರು ಯಾವ ರೀತಿ ಹಗರಣ ಮುಂದುವರೆಸುತ್ತಾರೆ, ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಾರೆ ಎಂಬುದರ ಕುರಿತು ತನಿಖೆಯಾದಲ್ಲಿ ಸತ್ಯ ಸಂಗತಿ ಹೊರಬರುತ್ತದೆ ಎಂದರು.

ನಟರಾಜ್ ಲಾಡೆ ಅವರ ಆಸ್ತಿ ಪಾಸ್ತಿ ಹಾಗೂ ಆದಾಯದ ಕುರಿತು ಸಮಗ್ರ ವಿಚಾರಣೆ ಕೈಗೊಳ್ಳಬೇಕು. ಬೇನಾಮಿ ಹೆಸರಿನ ಮೇಲೆ ಮಾಡಿರುವ ಆಸ್ತಿ, ಪಾಸ್ತಿಗಳ ಕುರಿತು ತನಿಖೆ ಆಗಬೇಕು ಎಂದು ಅವರು ಒತ್ತಾಯಿಸಿದರು.

ಸಚಿವ ಸಂಪುಟ ಸಭೆಯಲ್ಲಿ ಖಾಸಗಿ ಶಾಲೆಗಳಿಗೆ ಅತಿಥಿ ಶಿಕ್ಷಕರನ್ನು ಆದೇಶ ರದ್ದುಪಡಿಸಿ, ಪ್ರಜ್ಞಾ ಪ್ರೌಢಶಾಲೆಯಲ್ಲಿ ಹದಿನೈದು ಶಿಕ್ಷಕರು, ಇಬ್ಬರು ಬೋಧಕೇತರ ಸಿಬ್ಬಂದಿಗೆ ಅನುಮತಿ ಕೊಡುತ್ತಾರೆ. ಆ ಪತ್ರದಲ್ಲಿ ಈ ಒಂದು ಆದೇಶ ಮುಂಬರುವ ದಿನಗಳಲ್ಲಿ ಯಾವುದಕ್ಕೂ ಅನ್ವಯ ಆಗುವುದಿಲ್ಲ. ಕರ್ನಾಟಕದಲ್ಲಿ ಇವರು ಏಕಪಕ್ಷೀಯವಾಗಿ ಅಧಿಕಾರ ದುರುಪಯೋಗ ಹಾಗೂ ಜನರ ತುಳಿತಾ ಇದ್ದಾರೆ. ಗುಂಪಿನಲ್ಲಿ ಎಷ್ಟು ಶಿಕ್ಷಕರು ವೇತನ ಸಿಗದೇ ವಿಷ ಕುಡಿಯುವುದಾಗಿ ಹೇಳುತ್ತಿದ್ದಾರೆ. ಆದಾಗ್ಯೂ, ಸಂಸದರು, ಸಚಿವರು ಏನೂ ಮಾಡುತ್ತಿಲ್ಲ. ಇದು ನಡೆಯದು. ಎಲ್ಲ ಹಗರಣಗಳ ಬುದ್ಧ, ಬಸವ, ಅಂಬೇಡ್ಕರ್ ವಿರೋಧಿಗಳಾಗಿವೆ. ಪರಿವರ್ತನೆ ಮಾಡಬೇಕಿತ್ತು. ನೀವು ಮೊದಲು ಪರಿವರ್ತನೆ ಆಗಿ. ಅಧಿಕಾರ ದುರ್ಬಳಕೆ ನಿಲ್ಲಿಸಿ, ಪಿಐಎಲ್ ಹಾಕುತ್ತೇವೆ ಎಂದು ಅವರು ಹೇಳಿದರು.

ನಗರದ ನಂದೂರ್ ಕೈಗಾರಿಕಾ ಪ್ರದೇಶದಲ್ಲಿರುವ ಪ್ಲಾಟ್ ನಂಬರ್ 214ರಲ್ಲಿನ ಸೀರಿಯಲ್ ನಂಬರ್ 61 ಮತ್ತು 62ರ ಮಳಿಗೆಗಳಲ್ಲಿ ಕ್ಷೀರ ಭಾಗ್ಯ ಹಾಲಿನ ಪೌಡರ್ ಹಾಗೂ ಪಡಿತರ ಅಕ್ಕಿಯನ್ನು ಅಕ್ರಮವಾಗಿ ಸಂಗ್ರಹಿಸಿದ್ದನ್ನು ಬಿಜೆಪಿ ಕಾರ್ಯಕರ್ತರು ಅಧಿಕೃತವಾಗಿ ಪತ್ತೆ ಹಚ್ಚಿ ಸಂಬಂಧಪಟ್ಟವರಿಗೆ ಮಾಹಿತಿ ನೀಡಿದರೂ ಸಹ ಇಲ್ಲಿಯವರೆಗೂ ಯಾವುದೇ ಕ್ರಮ ಕೈಗೊಳ್ಳದೇ ಇಡೀ ಪ್ರಕರಣವನ್ನು ಮುಚ್ಚಿ ಹಾಕಲು ಯತ್ನಿಸಿದ್ದಾರೆ. ಆ ಕುರಿತು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಉಪ ನಿರ್ದೇಶಕರು ಕೊಟ್ಟ ಸ್ಪಷ್ಟೀಕರಣದಲ್ಲಿಯೂ ಸಹ ಯಾವುದೇ ಸ್ಪಷ್ಟತೆ ಇಲ್ಲ ಎಂದು ದೂರಿದರು.

ರಾತ್ರಿ ಏಳೆಂಟು ಗಂಟೆಗೆ ಕಾರ್ಯಕರ್ತರಿಗೆ ಅನುಮಾನ ಬಂದಿದ್ದರಿಂದ 2212ಗೆ ಕರೆ ಮಾಡಿ ಅವ್ಯವಹಾರದ ಕುರಿತು ತಿಳಿಸಿದಾಗ, ಅವರು ಸ್ಥಳೀಯ ಪೋಲಿಸ್ ಠಾಣೆಗೆ ಮಾಹಿತಿ ಕೊಟ್ಟರೂ ಅವರು ಸರಿಯಾಗಿ ಕ್ರಮ ಕೈಗೊಂಡಿಲ್ಲ. ಪೋಲಿಸ್ ಮತ್ತು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯವರು ಅಕ್ರಮಕ್ಕೆ ಸಹಕಾರ ಕೊಡುತ್ತಿದ್ದಾರೆ ಎಂಬ ಅನುಮಾನ ಬರುತ್ತಿದೆ ಎಂದು ಅವರು ಸಂಶಯ ವ್ಯಕ್ತಪಡಿಸಿದರು.

ನಮ್ಮ ಕಾರ್ಯಕರ್ತರು ಮಾಹಿತಿ ಕೊಟ್ಟರೂ ಸಹ ಆ ಗೋದಾಮಿನಲ್ಲಿ ಇದ್ದ ಅಕ್ರಮ ಪಡಿತರ ಅಕ್ಕಿ ಹಾಗೂ ಕ್ಷೀರಭಾಗ್ಯ ಹಾಲಿನ ಪೌಡರನ್ನು ಖಾಲಿ ಮಾಡಲಾಗಿದೆ. 50-60 ಕ್ವಿಂಟಲ್ ಹಾಲಿನ ಪೌಡರ್, 100 ಕ್ವಿಂಟಲ್ ಅಕ್ಕಿ ಅಕ್ರಮವಾಗಿ ಗೋದಾಮಿನಲ್ಲಿ ಇಟ್ಟಿದ್ದರೂ ಸಹ ಗುಲಬರ್ಗಾ ವಿಶ್ವವಿದ್ಯಾಲಯ ಪೋಲಿಸ್ ಠಾಣೆಯವರು ಸಮರ್ಪಕವಾಗಿ ತನಿಖೆ ಕೈಗೊಂಡಿಲ್ಲ. ಇಲ್ಲಿಯವರೆಗೂ ಪ್ರಕರಣ ದಾಖಲಿಸಿಲ್ಲ ಎಂದು ಅವರು ಆರೋಪಿಸಿದರು.

ಅಕ್ರಮ ದಾಸ್ತಾನು ಸಂಗ್ರಹದಲ್ಲಿ ಬಸವರಾಜಗೌಡ ಅವರು ಶಾಮೀಲಾಗಿದ್ದಾರೆ. ಈ ಅಕ್ರಮದಲ್ಲ ಕಾಂಗ್ರೆಸ್ ಪಕ್ಷದವರೇ ಇದ್ದದ್ದು ನೂರಕ್ಕೆ ನೂರರಷ್ಟು ಸತ್ಯವಾಗಿದೆ ಎಂದು ದೂರಿದ ಅವರು, ಕಾರ್ಯಕರ್ತರ ಒತ್ತಾಯದ ಮೇಲೆ ರಾತ್ರಿ ನಾನೂ ಸಹ ಆ ಸ್ಥಳಕ್ಕೆ ಹೋದಾಗ ವಿಶ್ವವಿದ್ಯಾಲಯ ಠಾಣೆಯ ಓರ್ವ ಪೋಲಿಸ್ ಬಂದು ಕೇವಲ ತೋರಿಕೆಗೆ ಬಂದು ಹೋದವರಂತೆ ಮಾಡಿದರು. ಆ ಮಳಿಗೆಗಳಿಗೆ ಹಾಕಿದ್ದ ಬೀಗವನ್ನು ತೆರೆದು ಪರಿಶೀಲಿಸಲು ಹೇಳಿದರೂ ಸಹ ಆ ಕೆಲಸ ಮಾಡಲಿಲ್ಲ. ಮಳಿಗೆಯ ಬೀಗವನ್ನು ವಾರಸುದಾರರು ತೆಗೆಯುವಂತೆ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಕೊನೆಗೆ ಬೆಳಿಗ್ಗೆ ಆರು ಗಂಟೆಗೆ ಬಂದು ಪರಿಶೀಲಿಸಿದಾಗ ಅಕ್ರಮ ಪೌಡರ್ ಹಾಗೂ ಅಕ್ಕಿ ಪತ್ತೆಯಾಗಿದೆ. ಆ ಕುರಿತು ಭಾವ ಚಿತ್ರಗಳನ್ನು ಹಾಗೂ ವಿಡಿಯೋ ಗಳನ್ನು ನಾವು ಮಾಡಿದ್ದೇವೆ. ಆದಾಗ್ಯೂ, ಪ್ರಕರಣ ದಾಖಲಿಸಲು ಕ್ರಮ ಕೈಗೊಳ್ಳದೇ ವಿಳಂಬ ನೀತಿಯನ್ನು ಅನುಸರಿಸಿದರು. ಹೀಗಾಗಿ ಗೋದಾ ಮಿನಲ್ಲಿರುವ ಅಕ್ರಮ ಹಾಲಿನ ಪೌಡರ್ ಹಾಗೂ ಅಕ್ಕಿ ಅಲ್ಲಿಂದ ತೆರವುಗೊಳಿಸಲಾಗಿದೆ ಎಂದು ಅವರು ಆರೋಪಿಸಿದರು.

ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯವರು ಹಾಗೂ ಪೋಲಿಸರು ಅಕ್ರಮ ದಾಸ್ತಾನನ್ನು ತಮ್ಮ ವಶಕ್ಕೆ ಪಡೆದುಕೊಂಡು ವಿಚಾರಣೆ ಮಾಡದೇ ಬಿಟ್ಟುಕೊಟ್ಟಿದ್ದರಿಂದ ಇಡೀ ಪ್ರಕರಣ ಮುಚ್ಚಿಹಾಕುವ ಯತ್ನ ಮಾಡಲಾಗುತ್ತಿದೆ. ಹೀಗಾಗಿ ನಮ್ಮಲ್ಲಿರುವ ಸಾಕ್ಷಿ ಆಧಾರದ ಮೇಲೆ ಮತ್ತೆ ನಾವು ಪೋಲಿಸರಿಗೆ ಹಾಗೂ ಆಹಾರ ಇಲಾಖೆಯ ಅಧಿಕಾರಿಗಳಿಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ನಾವು ಒತ್ತಾಯಿಸುತ್ತೇವೆ. ಅದಕ್ಕೂ ಕ್ರಮ ಕೈಗೊಳ್ಳದೇ ಹೋದಲ್ಲಿ ನಾವು ನ್ಯಾಯಾಲಯಕ್ಕೆ ಹೋಗುತ್ತೇವೆ ಎಂದು ಅವರು ಎಚ್ಚರಿಸಿದರು.

# ಅಭಿವೃದ್ಧಿಗೆ ವಾಸ್ತುಶಿಲ್ಪಿಗಳ ಕೊಡುಗೆ ಅಪಾರ



**ಕಲಬುರಗಿ:ಅ.08:** ಯೋಜನೆಯುತ ಕಾರ್ಯದಿಂದ ಯಶಸ್ಸು ಸಾಧ್ಯವಿದೆ. ಸೂಕ್ತ ವಿನ್ಯಾಸ, ಯೋಜನೆ ಮತ್ತು ಮೇಲ್ವಿಚಾರಣೆಯ ಕಾರ್ಯ ಮಾಡುವ ಮೂಲಕ ಯಾವುದೇ ರೀತಿಯ ಕಟ್ಟಡ ಕಾರ್ಯಗಳನ್ನು ಮಾಡುವ ವಾಸ್ತುಶಿಲ್ಪಿಗಳ ಕಾರ್ಯ ಪ್ರಮುಖವಾಗಿದೆ. ಇಂದು ನಾವು ಕಾಣುವ ಅದ್ಭುತವಾದ ಕಟ್ಟಡಗಳ ಹಿಂದೆ ಅವರ ಶ್ರಮ ಮರೆಯುವಂತಿಲ್ಲ ಎಂದು ಸಿವಿಲ್ ಇಂಜಿನಿಯರ್ ಬಸವರಾಜ ಎಂ.ಕುಲಕರ್ಣಿ ಹೇಳಿದರು.

ನಗರದ ಬ್ರಹ್ಮಪುರ ಶಾಸ್ತ್ರೀ ಚೌಕ್ ಸಮೀಪವಿರುವ ಶರಣಬಸವೇಶ್ವರ ಕಂಪ್ಯೂಟರ ತರಬೇತಿ ಕೇಂದ್ರ'ದಲ್ಲಿ ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಸೋಮವಾರ ಜರುಗಿದ ವಿಶ್ವ ಆರ್ಕಿಟೆಕ್ಟ್ ದಿನಾಚರಣೆ'ಯನ್ನು ಉದ್ಘಾಟಿಸಿ, ಗೌರವ ಸ್ವೀಕರಿಸಿ ಅವರು ಮಾತನಾಡಿದರು.

ಹಿಂದು ಧರ್ಮದಲ್ಲಿ ವಿಶ್ವಕರ್ಮ ಅವರನ್ನು ಪ್ರಥಮ ವಾಸ್ತುಶಿಲ್ಪಿ ಎಂದು ಉಲ್ಲೇಖಿಸಲಾಗಿದೆ. ಹಿನ್ನಲೆ ಗಮನಿಸಿದಾಗ ಪ್ರತಿವರ್ಷ ಅಕ್ಟೋಬರ್ ತಿಂಗಳಿನ ಮೊದಲನೇ ಸೋಮವಾರದಂದು ವಾಸ್ತುಶಿಲ್ಪಿಗಳ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಫ್ರಾಂಕ್ ಲಿಯಾಡ್ ರೈಟ್' ಎಂಬ ಅಮೇರಿಕನ್ ಆರ್ಕಿಟೆಕ್ಟ್ ಅವರ ಸ್ಮರಣಾರ್ಥವಾಗಿ ಇದನ್ನು ಆಚರಿಸಲಾಗುತ್ತದೆ. ಇಟಲಿ, ಜೆರ್ಮನಿ, ಸ್ಪೇನ್, ಯುಕೆ, ಫ್ರಾನ್ಸ್, ಜಪಾನ್, ಕೆನಡಾ, ಆಸ್ಟ್ರೇಲಿಯಾ, ನೆದರಲ್ಯಾಂಡ್ ಮತ್ತು ಚೀನಾ ದೇಶಗಳು ಪ್ರಸಿದ್ಧ ವಾಸ್ತುಶಿಲ್ಪ ರಾಷ್ಟ್ರಗಳಾಗಿವೆ. ನಮ್ಮ ದೇಶವು ಕೂಡಾ ಈ ನಿಟ್ಟಿನಲ್ಲಿ ಸಾಧನೆಯಲ್ಲಿದೆ. ಭಾರದತ ಆಧುನಿಕ ವಾಸ್ತುಶಿಲ್ಪಿ ಎಂದು ಬಿ.ವಿ ದೇಸಾಯಿ ಅವರನ್ನು ಕರೆಯಲಾಗುತ್ತದೆ. ಈ ಕ್ಷೇತ್ರದಲ್ಲಿ ಸಾಕಷ್ಟು ಉದ್ಯೋಗಾವಕಾಶಗಳಿದ್ದು, ಯುವಕರು ಸದುಪಯೋಗ ಮಾಡಿಕೊಳ್ಳಲು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಳಗದ ಅಧ್ಯಕ್ಷ ಹಾಗೂ ಉಪನ್ಯಾಸಕ ಎಚ್.ಬಿ.ಪಾಟೀಲ, ಶರಣಬಸವೇಶ್ವರ ಕಂಪ್ಯೂಟರ ತರಬೇತಿ ಕೇಂದ್ರದ ಅಧ್ಯಕ್ಷ ಕ್ಷೇಮಲಿಂಗ ಎಸ್.ರೆಡ್ಡಿ, ಪ್ರಮುಖರಾದ ಶರಣಗೌಡ ಪಾಟೀಲ ರೇವೂರ, ಶುಭಂ, ಸಂಗೀತಾ, ಪ್ರವಾಲಿಕಾ, ನಾಗವೇಣಿ ಹಾಗೂ ವಿದ್ಯಾರ್ಥಿಗಳಿದ್ದರು.

# ವಿಶ್ವ ಪ್ರವಾಸೋದ್ಯಮ ದಿನಾಚರಣೆ ಹಿನ್ನಲೆ: ಸೈಕ್ಲೋಥಾನ್‌ಗೆ ಡಿ.ಸಿ. ಚಾಲನೆ



**ಕಲಬುರಗಿ, ಅ.8-** ವಿಶ್ವ ಪ್ರವಾಸೋದ್ಯಮ ದಿನಾಚರಣೆ ನಿಮಿತ್ಯ ರವಿವಾರ ಕಲಬುರಗಿ ನಗರದ ಐವಾನ್-ಎ-ಶಾಹಿ-ಅತಿಥಿಗೃಹದಿಂದ ಐತಿಹಾಸಿಕ ಕಲಬುರಗಿ ಕೋಟೆವರೆಗೆ ನಡೆದ ಸೈಕ್ಲೋಥಾನ್‌ಗೆ ಡಿ.ಸಿ. ಬಿ.ಫೌಜಿಯಾ ತರನ್ನುಮ್ ಅವರು ಚಾಲನೆ ನೀಡಿದರು.

ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ, ಯುನೈಟೆಡ್ ಆಸ್ಪತ್ರೆ, ಕಲಬುರಗಿ ಸೈಕ್ಲಿಂಗ್ ಕ್ಲಬ್ ಹಾಗೂ ಇನಟ್ಯಾಕ್ ಕಲಬುರಗಿ ಸಂಯುಕ್ತಾಶ್ರಯದಲ್ಲಿ ಆಯೋಜಿ ಸಿದ ಸೈಕ್ಲೋಥಾನ್ ಗೆ ಚಾಲನೆ ನೀಡಲು ಡಿ.ಸಿ. ಬಿ.ಫೌಜಿಯಾ ತರನ್ನುಮ್ ಜಗತ್ ವೃತ್ತದಲ್ಲಿನ ತಮ್ಮ ಮನೆಯಿಂದ ಸೈಕಲ್ ಏರಿಯೆ ಅತಿಥಿಗೃಹಕ್ಕೆ ಬಂದರು. ನಂತರ ಇಲ್ಲಿ ಹಸಿರು ನಿಶಾನೆ ತೋರಿ ಸೈಕ್ಲಿಸ್ಟ್ ಜೊತೆಗೆ ಸೈಕಲ್ ಸವಾರಿ ಮೂಲಕ ಕೋಟೆ ವರೆಗೆ ಸಾಗಿದರು.

ಐವಾನ್-ಎ-ಶಾಹಿ ಅತಿಥಿಗೃಹ ದಿಂದ ಕೋಟೆ ವರೆಗಿದ ಸಾಗಿದ ಸೈಕಲ್ ರ್ಯಾಲಿಯಲ್ಲಿ ಶಾಲಾ-ಕಾಲೇಜು ವಿದ್ಯಾರ್ಥಿಗಳು, ಪುಟಾಣಿ ಮಕ್ಕಳು, ಯುವಕರು, ಸೈಕ್ಲಿಸ್ಟ್‌ಗಳು ಉತ್ಸಾಹದಿಂದ ಭಾಗಿಯಾಗಿ ಪ್ರವಾಸಿ ಮತ್ತು ಐತಿಹಾಸಿಕ ತಾಣಗಳ ಸಂರಕ್ಷಣೆ ಕುರಿತು ಜನರಲ್ಲಿ ಜಾಗೃತಿ ಮೂಡಿಸಿದರು. ಕೋಟೆಗೆ ಪ್ರವೇಶಿಸಿದ ಶಾಲಾ-ಕಾಲೇಜು ಮಕ್ಕಳಿಗೆ ಡಾ. ಶಂಭುಲಿಂಗ ವಾಣಿ ಅವರು ಬಹಮನಿ ಕೋಟೆಯ ಇತಿಹಾಸ ಕುರಿತು ವಿವರಿಸಿದರು.

ಜಿಲ್ಲಾಧಿಕಾರಿಗೆ ಡಿ.ಸಿ.ಪಿ ಬಿಂದು ರಾಣಿ, ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕಿ ಮೀನಾಕ್ಷಿ ಆರ್ಯ, ಕಲಬುರಗಿ ತಹಶೀಲ್ದಾರ ಆನಂದಶೀಲ, ಕಲಬುರಗಿ ಸೈಕ್ಲಿಂಗ್ ಅಸೋಸಿಯೇಷನ್ ಕಿರಣ ಶೀತಕರ್ ಸಾತ್ ನೀಡಿದರು.

ಸ್ವಚ್ಛತೆಯೆ ಪ್ರವಾಸಿ ಆಕರ್ಷಣೆ: ಸ್ವಚ್ಛತಾ ಹೀ ಸೇವಾ-2024ರ ಅಂಗವಾಗಿ ಸ್ವಭಾವ್ ಸ್ವಚ್ಛತಾ- ಸಂಸ್ಕಾರ ಸ್ವಚ್ಛತಾ ಸಂದೇಶದಡಿಯಲ್ಲಿ ಕಲಬುರಗಿಯ ಐತಿಹಾಸಿಕ ಬಹಮನಿ ಕೋಟೆಯೊಳಗೆ ನಡೆದ ಶ್ರಮದಾನ ಕಾರ್ಯದಲ್ಲಿ ಭಾಗವಹಿಸಿದ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಸಭಿಕರನ್ನುದ್ದೇಶಿಸಿ ಮಾತನಾಡಿ, ಪ್ರವಾಸಿ ಮತ್ತು ಐತಿಹಾಸಿಕ ಸ್ಥಳವನ್ನು ಸ್ವಚ್ಛತೆಯಿಂದ ಸಂರಕ್ಷಣೆ ಮಾಡಿದಲ್ಲಿ ಪ್ರವಾಸಿಗರನ್ನು ಆಕರ್ಷಿಸಬಹುದಾಗಿದೆ. ಪ್ರವಾಸಿಗರ ಆಗಮನದಿಂದ ಸ್ಥಳೀಯವಾಗಿ ಆರ್ಥಿಕ ಚಟುವಟಿಕೆ ಗರಿಗೆದರುತ್ತವೆ. ಸ್ವಚ್ಛತೆಯೆ ಪ್ರವಾಸಿ ಆಕರ್ಷಣೆ ಎಂಬುದನ್ನು ಯಾರು ಮರೆಯಬಾರದು ಎಂದರು.

ಕೋಟೆಯೊಳಗೆ ನಡೆದ ಶ್ರಮದಾನದಲ್ಲಿ ಜಿಲ್ಲಾಧಿಕಾರಿ ಆದಿಯಾಗಿ ಅಧಿಕಾರಿ-ಸಿಬ್ಬಂದಿಗಳು, ಶಾಲಾ-ಕಾಲೇಜು ಮಕ್ಕಳು, ಕೈಯಲ್ಲಿ ಸಲಕಿ, ಪೊರಕೆ ಹಿಡಿದು ಹುಲ್ಲು, ಗಿಡಗಂಟಿಗಳನ್ನು ಕಿತ್ತರು. ಅಲಲ್ಲಿ ಬಿದ್ದ ಕಸಗಳು ಆಯ್ದರು.




# ಮಡಿವಾಳ್ ಮಾಚಿದೇವ ವಚನ ಸಾಹಿತ್ಯ ರಕ್ಷಿಸಿದ ಸಾಹಸಿ: ಡಾ.ಶ್ರೀಕಾಂತ್ ಪಾಟೀಲ್



**ಬೀದರ್, ಅ.8-** ಮಡಿವಾಳ್ ಮಾಚಿದೇವ ವಚನ ಸಾಹಿತ್ಯ ರಕ್ಷಿಸಿ ಉಳುವಿಗೆ ತಲುಪಿಸಿದ ಸಾಹಸಿ ಎಂದು ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಸಹ ಪ್ರಾಧ್ಯಾಪಕ ಡಾ. ಶ್ರೀಕಾಂತ್ ಪಾಟೀಲ್ ಅವರು ಬಣ್ಣಿಸಿದರು.

ನಗರದ ಬಸವಗಿರಿಯ ಲಿಂಗಾಯತ ಮಹಾಮಠದಲ್ಲಿ ಮರಣವೇ ಮಹಾನವಮಿ ಹಾಗೂ ಕಲ್ಯಾಣ ಕ್ರಾಂತಿ ವಿಜಯೋತ್ಸವದ ಮೂರನೇ ದಿನದ ಶನಿವಾರ ನಡೆದ 'ವಚನ ಸಂರಕ್ಷಣೆಯಲ್ಲಿ ಮಡಿವಾಳ ಮಾಚಿದೇವರು' ಚಿಂತನ ಗೋಷ್ಠಿಯಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು, ಕಲ್ಯಾಣ ಕ್ರಾಂತಿಯ ಕೊನೆಯ ಘಟ್ಟದಲ್ಲಿ ಗುರುತರವಾದ ಜವಾಬ್ದಾರಿ ಹೊತ್ತವರು ಮಡಿವಾಳ ಮಾಚಿದೇವ.

ಶರಣ ಧರ್ಮ ಹಾಗೂ ವಚನ ಸಾಹಿತ್ಯದ ಸಂರಕ್ಷಣೆಯ ದಂಡನಾಯಕತ್ವ ವಹಿಸಿದರು. ಚನ್ನಬಸವಣ್ಣ, ಅಕ್ಕನಾಗಮ್ಮ, ಕಿನ್ನರಯ್ಯ ಮೊದಲಾದವರೊಂದಿಗೆ ಸಂಪ್ರದಾಯವಾದಿಗಳನ್ನು, ಕಲಚೂರ್ಯ ಮರಿ ಅರಸರಾಯ ಮುರಾರಿ ಯನ್ನು ಎದುರಿಸಿ ಸೋಲಿಸಿದರು ಎಂದು ತಿಳಿಸಿದರು.

ತತ್ವದ ಆಚರಣೆಯಲ್ಲಿ ರಾಜ ಬಿಜ್ಜಳನನ್ನು ಎದುರಿಸುವ ಎದೆಗಾರಿಕೆ, ಬಸವ ನಿಷ್ಠೆ, ಸಮಾಜ ಪ್ರೇಮ, ನರಸತ್ತವರಲ್ಲಿಯೂ ಕೆಚ್ಚಿನ ಕಿಚ್ಚು ಹೊತ್ತಿಸುವ ಸ್ವಭಾವ ಅವರದ್ದಾಗಿತ್ತು. ಅಂತೆಯೇ ಜನಪದರು 'ಲಿಂಗವಂತರ ಚಿನ್ನೆ ಉಳಿಸಿದ ಮಡಿವಾಳ ಮಾಚಯ್ಯನೆಂದು' ಹಾಡಿ ಹರಸಿದ್ದಾರೆ ಎಂದು ಅವರು ಹೇಳಿದರು.

ಬಸವ ಧರ್ಮದ ಪಂಚಾಚಾರಗಳಲ್ಲಿ ಕೊನೆಯದಾದ ಗಣಾಚಾರ ಪಾಲಿಸಿಕೊಂಡು ಬಂದಿದ್ದ ಮಾಚಿದೇವರು ವೀರ ಗಣಾಚಾರಿ ಎಂದೇ ಹೆಸರಾಗಿದ್ದರು. 'ಬಸವಣ್ಣನೆ ಗುರು, ಪ್ರಭುದೇವರೆ ಲಿಂಗ, ಸಿದ್ದರಾಮಯ್ಯನೆ ಜಂಗಮ, ಮಡಿವಾಳಯ್ಯನೆ ಎನ್ನ ಹೆತ್ತ ತಂದೆ' ಎಂಬ ಅಕ್ಕನ ವಚನ ಮಾಚಿದೇವರಲ್ಲಿ ಕಂಡ ಪಿತೃ ಪ್ರೇಮದ ದ್ಯೋತಕ. ಡಾಂಬಿಕ ಭಕ್ತಿ, ಕ್ಷುದ್ರ ದೇವತೆಗಳ ಆರಾಧನೆ, ವೇಷಧಾರಿಗಳ ವರ್ತನೆಗಳನ್ನು ಅವರು ಖಂಡಿಸಿದರು. ಅವರ 353 ವಚನಗಳು ದೊರೆತಿವೆ ಎಂದು ಅವರು ತಿಳಿಸಿದರು.

ವಚನ ಓದಿ ಗೋಷ್ಠಿಗೆ ಚಾಲನೆ ನೀಡಿದ ಜಿಲ್ಲಾ ಪಂಚಾಯಿತಿ ಮುಖ್ಯ ಲೆಕ್ಕಾಧಿಕಾರಿ ಶ್ರೀಕಾಂತ್ ವೈರಾಗೆ ಅವರು ಮಾತನಾಡಿ, ಮಾಚಿದೇವರ ವೀರತನವನ್ನು ಯುವ ಪೀಳಿಗೆ ಅಳವಡಿಸಿಕೊಳ್ಳಬೇಕು. ಅವರ ವಚನಗಳನ್ನು ಅನುಸರಿಸಬೇಕು ಎಂದು ಸಲಹೆ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ಗ್ರಾಮೀಣ ಕೈಗಾರಿಕೆ ಇಲಾಖೆಯ ಉಪ ನಿರ್ದೇಶಕ ರಾಜಕುಮಾರ್ ಪಾಟೀಲ್ ಅವರು ಮಾತನಾಡಿ, ಮಡಿವಾಳ್ ಮಾಚಿದೇವರು ಬಟ್ಟೆ ಮಡಿ ಮಾಡುವುದಷ್ಟೇ ಅಲ್ಲ, ಜನರ ಮನದ ಮೈಲಿಗೆಯನ್ನೂ ತೊಳೆದು ಮಡಿ ಮಾಡಿದರು. ಶರಣ ಪಥಕ್ಕೆ ಸಲ್ಲುವಂತೆ ಮಾಡಿದರು. ಅನುಭವ ಮಂಟಪದ ಮಹತ್ವದ ಪ್ರಸಂಗಗಳಲ್ಲಿ ಮಾರ್ಗ ತೋರಿದರು ಎಂದು ಹೇಳಿದರು. ಗುರುಶ್ರೀ ಮಠಪತಿ ವಚನ ಗಾಯನ, ಲಿಂಗಾಯತ ಸೇವಾ ದಳದ ಸಂದೀಪ್ ಚಿದ್ರೆ ವಚನ ಪಠಣ, ಕಂಟೆಪ್ಪ ಗಂದಿಗುಡೆ, ಮಹೇಶ್ ಬಿರಾದಾರ್ ಹಾಗೂ ರೇವಣಪ್ಪ ಮೂಲಗೆ ಅವರು ವಚನ ಭಜನೆ ನಡೆಸಿಕೊಟ್ಟರು.

ಗಾಂಧಿಗಂಜ್ ಸಹಕಾರ ಬ್ಯಾಂಕ್ ನಿವೃತ್ತ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶಿವಕುಮಾರ್ ಶೆಟಕಾರ್, ಉದ್ಯಮಿ ವಿವೇಕಾನಂದ್ ಧನ್ನೂರ್, ನೀಲಮ್ಮನ ಬಳಗದ ಸುರೇಖಾ ಎನ್. ವಡ್ಡನಕೇರಿ, ಸಾಹಿತಿ ರಮೇಶ್ ಮಠಪತಿ ಅವರು ಉಪ ಸ್ಥಿತರಿದ್ದರು.

# ಕರ್ಜಗಿ ನೇತೃತ್ವದಲ್ಲಿ ಶೈಕ್ಷಣಿಕ ಸುಧಾರಣಾ ಸಮಿತಿ ರಚನೆ ಕಾಂಗ್ರೆಸ್ ಸರ್ಕಾರದ ದಿವಾಳಿಗೆ ಸಾಕ್ಷಿ: ಅರ್ಜುನ್ ಭದ್ರೆ ಕಿಡಿ



**ಕಲಬುರ್ಗಿ, ಅ.8–** ಕಲ್ಯಾಣ ಕರ್ನಾಟಕದ ಭಾಗದಲ್ಲಿ ಸತತವಾಗಿ ಎಸ್ ಎಸ್‌ಎಲ್‌ಸಿ ಫಲಿತಾಂಶ ಹಿಂದುಳಿಯುತ್ತಿದ್ದು, ಈ ಭಾಗದಲ್ಲಿ ಶೈಕ್ಷಣಿಕ ಸುಧಾರಣೆಗಾಗಿ ಸಮಿತಿ ರಚನೆ ಮಾಡಿ ಆ ಸಮಿತಿಗೆ ಗುರುರಾಜ್ ಕರ್ಜಗಿ ಯವರನ್ನು ಅಧ್ಯಕ್ಷ ಮಾಡಿದ್ದು ಕಾಂಗ್ರೆಸ್ ಸರ್ಕಾರದ ಸೈದ್ಧಾಂತಿಕ ದಿವಾಳಿತನವನ್ನು ಎತ್ತಿ ತೋರಿಸುತ್ತದೆ ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಅರ್ಜುನ್ ಭದ್ರೆ ಅವರು ಆಕ್ರೋಶ ಹೊರಹಾಕಿದರು.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗುರುರಾಜ್ ಕರ್ಜಗಿಯವರು ಕಾಲೇಜುಗಳಲ್ಲಿ ಆಯೋಜಿಸುವ ಸೆಮಿನಾರ್‌ಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸಿದ್ಧಾಂತಗಳನ್ನು ವಿದ್ಯಾರ್ಥಿಗಳ ತಲೆಗೆ ತುಂಬುವವರನ್ನು ಶಿಕ್ಷಣ ತಜ್ಞ ಎನ್ನುಲು ಸಾಧ್ಯವೇ?,

ಹಿಂದುತ್ವ ಮತ್ತು ಕೋಮು ದ್ವೇಷವನ್ನು ಬಿತ್ತರಿಸುವ ವಿಕ್ರಮ್ ಸಂವಾದ ಸಾಮಾಜಿಕ ಜಾಲತಾಣಗಳೊಂದಿಗೆ ಕರ್ಜಗಿಯವರು ಗುರುತಿಸಿಕೊಂಡವರು. ಆಗಾಗ ಸುದ್ದಿವಾಹಿನಿಗಳಲ್ಲಿ ಕುಳಿತು ಸನಾತನ ಧರ್ಮ ಹಿಂದುತ್ವದ ಪ್ರವಚನಗಳನ್ನು ನೀಡುತ್ತಿದ್ದಾರೆ ಎಂದು ಕಿಡಿಕಾರಿದರು.

ಮಕ್ಕಳ ಶೈಕ್ಷಣಿಕ ಸುಧಾರಣೆ ಕೆಲಸ ಮಾಡುವ ನೆಪದಲ್ಲಿ ಮಕ್ಕಳ ಓದು, ಅಧ್ಯಯನದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮನುವಾದಿ, ಕೋಮುವಾದಿ ಸಿದ್ಧಾಂತಗಳನ್ನು ತುಂಬಲು ಕಾಂಗ್ರೆಸ್ ಸರ್ಕಾರವೇ ಅವಕಾಶ ಮಾಡಿಕೊಟ್ಟಿದೆ ಎಂದು ಹರಿಹಾಯ್ದ ಅವರು, ಗುರುರಾಜ್ ಕರ್ಜಗಿಯವರನ್ನು ಶಿಕ್ಷಣ ತಜ್ಞರೆಂದು ಒಪ್ಪಲು ಸಾಧ್ಯವಿಲ್ಲ. ಮೌಢ್ಯ ಪ್ರತಿಪಾದಕ ಮತ್ತು ಅಪ್ಪಟ ಸನಾತನಿ. ಅಂತಹ ವ್ಯಕ್ತಿಯನ್ನು ಮಕ್ಕಳ ಬೌದ್ಧಿಕತೆ ಮತ್ತು ಭವಿಷ್ಯ ರೂಪಿಸುವ ಶೈಕ್ಷಣಿಕ ಸುಧಾರಣೆ ಸಮಿತಿಗೆ ಮುಖ್ಯಸ್ಥರನ್ನಾಗಿ ನೇಮಿಸಿರುವುದು ಸರ್ಕಾರದ ಆತ್ಮಹತ್ಯಾಕಾರಿ ಕೆಲಸ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಸಂವಿಧಾನ ಪ್ರಣೀತ ಸಂಸ್ಥೆಗಳು ವಿಶೇಷವಾಗಿ ಸರ್ಕಾರಗಳು ಕಾನೂನು ಬದ್ಧವಾಗಿ ನಡೆದುಕೊಳ್ಳುವುದು ಅದರ ಕರ್ತವ್ಯ. ಯಾವುದೇ ಅಭಿವೃದ್ಧಿ ಕೆಲಸದಲ್ಲೂ ಅಭಿವೃದ್ಧಿ ಮಾಡುವ ಸಮಿತಿಗಳಲ್ಲೂ ಸಮಾಜದ ಪ್ರತಿಯೊಬ್ಬರ ಪಾಲುದಾರಿಕೆ ಬಹಳ ಮುಖ್ಯ. ಅದರಲ್ಲೂ ಶೈಕ್ಷಣಿಕ ಕ್ಷೇತ್ರದ ಪ್ರತಿಯೊಂದು ಹಂತದಲ್ಲಿ ಸಾಂಸ್ಕೃತಿಕ ಹಂತದಲ್ಲಿಯೇ ಎಲ್ಲರನ್ನೂ ಒಳಗೊಳ್ಳುವುದು ಅಗತ್ಯವಾಗಿದೆ. ಇಂತಹ ಅಗತ್ಯವಾದ ಸಂದರ್ಭದಲ್ಲಿ ತಳ ಸಮುದಾಯವನ್ನು ಕಂಡು ಕಾಣದಂತೆ ನಿರ್ಲಕ್ಷ್ಯ ಮಾಡುತ್ತ ಬರಲಾಗುತ್ತಿದೆ ಎಂದು ಅವರು ಟೀಕಿಸಿದರು.

ಸರ್ಕಾರದಿಂದ ನೇಮಕಗೊಂಡ ವಿವಿಧ ಅಕ್ಯಾಡೆಮಿಗಳ ಸದಸ್ಯರುಗಳ ಪಟ್ಟಿಯಲ್ಲಿ ಕಲ್ಯಾಣ ಕರ್ನಾಟಕದವರು ಬಹಳ ಕಡಿಮೆ ಎಂಬುದು ಬೇರೆ ಹೇಳಬೇಕಾಗಿಲ್ಲ. ರಂಗಾಯಣದ ನೇಮಕದಲ್ಲಿ ದಲಿತರಿಗೆ ಅನ್ಯಾಯವಾಗಿದೆ. ಈ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ವಿವಿಧ ಕ್ಷೇತ್ರಗಳ ಸಾಧಕರ ಆಯ್ಕೆಗೆ ಸರ್ಕಾರ ತಜ್ಞರ ಸಮಿತಿಯನ್ನು ರಚನೆ ಮಾಡಿ 48 ಸದಸ್ಯರನ್ನು ಆಯ್ಕೆ ಮಾಡಿದೆ. ಅಲ್ಲಿಯೂ ಕೂಡ ಕಲ್ಯಾಣ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಮೂಲ ಅಸ್ಪಶ್ಯರನ್ನು ಬದಿಗೆ ಸರಿಸಲಾಗಿದೆ. ಇಂತಹ ವಿಷಯಗಳಲ್ಲಿ ಬಿಜೆಪಿ ಪಕ್ಷದವರು ದಲಿತ ವಿರೋಧಿ ನೀತಿಅನುಸರಿಸುವುದು ಸಹಜ. ಅವರು ದಲಿತರಿದ್ದರು, ಆರ್‌ಎಸ್‌ಎಸ್‌ಗೆ ಸನಿಹ ಇದ್ದವರಿಗೆ ಮಾತ್ರ ನೇಮಕ ಮಾಡುತ್ತಾರೆ. ಆದಾಗ್ಯೂ, ಕಾಂಗ್ರೆಸ್ ಪಕ್ಷದವರು ದಲಿತರನ್ನು ಕಡೆಗಣಿಸುತ್ತಿರುವುದು ಕಂಡು ಬರುತ್ತಿದೆ ಎಂದು ಅವರು ಅಸಮಾಧಾನವನ್ನು ವ್ಯಕ್ತಪಡಿಸಿದರು.

ಕಲ್ಯಾಣ ಕರ್ನಾಟಕದ ಶೈಕ್ಷಣಿಕ ಸುಧಾರಣೆಗೆ ಸಮಿತಿಯಲ್ಲಿ ಯಾವೊಬ್ಬ ದಲಿತ ಶಿಕ್ಷಣ ತಜ್ಞರನ್ನು ನೇಮಕ ಮಾಡದೇ ಇರುವುದು ಸಾಮಾಜಿಕ ನ್ಯಾಯದ ಉಲ್ಲಂಘನೆಯಾಗಿದೆ. ಗುರುರಾಜ್ ಕರ್ಜಗಿಯವರು ಮೂಲತ: ಸಂಘ ಪರಿವಾರದ ನಂಟಿನವರು. ಶೈಕ್ಷಣಿಕವಾಗಿ, ಸಾಮಾಜಿಕವಾಗಿ ದೇಶ ಬೆಳೆಯಬೇಕಾದರೆ ಭಾರತದ ಕಣ್ಣುಗಳಾದ ಅಂಬೇಡ್ಕರ್– ಗಾಂಧಿ ಇಬ್ಬರೂ ಬೇಕು. ಇಬ್ಬರ ದೃಷ್ಟಿಕೋನ ಇಟ್ಟುಕೊಂಡು ನಡೆದರೆ ಎಲ್ಲ ಯೋಜನೆಗಳು ಯಶಸ್ವಿಯಾಗುತ್ತವೆ. ಈಗ ಹಾಗೆ ಆಗುತ್ತಿಲ್ಲ ಎಂದು ಅವರು ಹೇಳಿದರು.

ಅಂಬೇಡ್ಕರ್ ಅವರ ದೃಷ್ಟಿಕೋನ ಇಲ್ಲ. ಶಿಕ್ಷಣ ತಜ್ಞರನ್ನು ಸಮಿತಿಯಲ್ಲಿ ಸೇರ್ಪಡೆ ಮಾಡುವುದು ಅಗತ್ಯವಾಗಬೇಕು. ಸರ್ಕಾರ ಅಥವಾ ಸಂಸ್ಥೆಗಳಲ್ಲಿ ಅಧ್ಯಕ್ಷ ಹಾಘೂ ಸದಸ್ಯರನ್ನು ನೇಮಕ ಮಾಡುವಾಗ ಸಾಮಾಜಿಕ ನ್ಯಾಯವನ್ನು ಕಡ್ಡಾಯವಾಗಿ ಪಾಲಿಸುವುದು ಅಗತ್ಯವಾಗಿದೆ ಎಂದು ಅವರು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಲ್ಲಿಕಾರ್ಜುನ್ ಖನ್ನಾ, ಸೂರ್ಯಕಾಂತ್ ಆಜಾದಪೂರ್, ಕಪೀಲ್ ಸಿಂಗೆ ಮುಂತಾದವರು ಉಪಸ್ಥಿತರಿದ್ದರು.

# ರಸ್ತೆ ಕಾಮಗಾರಿ ಸ್ಥಳಕ್ಕೆ ಶಾಸಕ ಎಂ.ವೈ.ಪಾಟೀಲ್ ದೌಡು: ವಿಳಂಬವಾದರೆ ಕ್ರಮದ ಎಚ್ಚರಿಕೆ



**ಅಫಜಲಪುರ, ಅ.8–** ತಾಲ್ಲೂಕಿನ ಫರಹತಾಬಾದ್ ವಲಯದ ಹೊನ್ನಕಿರಣಗಿ, ಮಾರ್ಗವಾಗಿ ತೋನಶಿಹಳ್ಳಿ ಗ್ರಾಮಕ್ಕೆ ಹೋಗುವ 5 ಕಿ.ಮೀ ಉದ್ದದ ರಸ್ತೆ ಕಾಮಗಾರಿಯು ಪಿಎಂಜಿಎಸ್ ವೈ ಯೋಜನೆಯಡಿ ಯಲ್ಲಿ ಅಂದಾಜು ಸುಮಾರು 5.54 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣವಾಗುತ್ತಿದ್ದು, ರಸ್ತೆ ಕಾಮಗಾರಿಯನ್ನು ಶಾಸಕ ಎಂ.ವೈ. ಪಾಟೀಲ್ ಅವರು ಪರಿಶೀಲನೆ ನಡೆಸಿದರು.

ನಂತರ ಸ್ಥಳದಲ್ಲೇ ಇದ್ದ ಅಧಿಕಾರಿಗಳ ಜೊತೆ ಮಾತನಾಡಿದ ಅವರು, ನಾನು ಯಾವ ಗ್ರಾಮಕ್ಕೆ ಹೋಗುತ್ತಿದ್ದೇನೆ ಎಂದು ನನ್ನ ಬೆಂಬಲಿಗರಿಂದ ಮಾಹಿತಿ ಪಡೆದುಕೊಂಡು ನಾನು ಕಾಮಗಾರಿ ನಡೆಯುವ ಸ್ಥಳಕ್ಕೆ ಆಗಮಿಸಿದಾಗ ಮಾತ್ರ ಅಧಿಕಾರಿಗಳು ನನ್ನ ಎದರು ಪ್ರತ್ಯಕ್ಷವಾಗಿ ನಂತರ ಕಾಮಗಾರಿ ನಡೆಯುವ ಸ್ಥಳದಿಂದ ಹೊರಟು ಹೋಗುತ್ತೀರಿ ಎಂದು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಹಿಂದಿನ ಸರ್ಕಾರದಲ್ಲಿಯೂ ಕೂಡಾ ನಮ್ಮ ಪಕ್ಷದ ಸರ್ಕಾರ ಇಲ್ಲದೆ ಇದ್ದರೂ ಅವರ ಜೊತೆ ಗುದ್ದಾಡಿ ಕ್ಷೇತ್ರಕ್ಕೆ ಸಾಕಷ್ಟು ಅನುದಾನ ತಂದು ಅಭಿವೃದ್ಧಿ ಮಾಡಿದ್ದು ಆದರೂ ಕೂಡಾ ಕೆಲ ಅಧಿಕಾರಿಗಳ ಅಸಡ್ಡೆತನದಿಂದ ಕೆಲವೊಂದು ಹಳೆಯ ಹಿಂದಿನ ಕಾಮಗಾರಿಗಳು ಸಂಪೂರ್ಣವಾಗಿ ಮುಗಿದಿಲ್ಲ ಅಸಮಧಾನ ವ್ಯಕ್ತಪಡಿಸಿದ ಅವರು, ಸದ್ಯ ಈಗ ರಾಜ್ಯದಲ್ಲಿ ನಮ್ಮದೇ ಪಕ್ಷದ ಸರ್ಕಾರ ಅಸ್ತಿತ್ವದಲ್ಲಿದೆ ಕ್ಷೇತ್ರದಲ್ಲಿ ನೂರಕ್ಕೂ ಹೆಚ್ಚು ಗ್ರಾಮಗಳು ನನ್ನ ವ್ಯಾಪ್ತಿಯಲ್ಲಿ ಬರುತ್ತವೆ ಅಲ್ಲದೆ ನಾನು ಒಂದು ಕ್ಷಣ ವಿಶ್ರಮಿಸದೆ ಸರ್ಕಾರದ ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ಹಾಗೂ ಸಂಬಂಧಪಟ್ಟ ಸಚಿವರಗಳನ್ನು ಭೇಟಿಯಾಗಿ ಅವರ ಮನವೊಲಿಸಿ ಕ್ಷೇತ್ರಕ್ಕೆ ಸಾಕಷ್ಟು ಅನುದಾನ ತಂದು ಪ್ರತಿ ಗ್ರಾಮದಲ್ಲಿ ಒಂದಿಲ್ಲೊಂದು ರೀತಿಯಲ್ಲಿ ಯೋಜನೆಯ ರೂಪಿಸಿ ಕಾಮಗಾರಿಗಳಿಗೆ ಅಭಿವೃದ್ಧಿಗೆ ಒತ್ತು ನೀಡುತ್ತಿದ್ದೇನೆ ಎಂದರು.

ಆದಾಗ್ಯೂ, ಸರ್ಕಾರದಿಂದ ತಂದ ಅನುದಾನವನ್ನು ಕ್ಷೇತ್ರದ ಅಭಿವೃದ್ಧಿಗೆ ಸದುಪಯೋಗಪಡಿಸಿಕೊಳ್ಳಬೇಕು. ಆ ನಿಟ್ಟಿನಲ್ಲಿ ಅಧಿಕಾರಿಗಳು ಮುಂದಾಗಬೇಕು. ಅದನ್ನು ಬಿಟ್ಟು ನಾನು ಬಂದಾಗ ಮಾತ್ರ ನನ್ನ ಎದುರು ಪ್ರತ್ಯಕ್ಷವಾಗಿ ನಂತರ ನೀವಾಯ್ತು ನಿಮ್ಮ ಕಚೇರಿವಾಯಿತು ಎಂದು ಅಂದು ಬಿಟ್ಟರೆ ಕ್ಷೇತ್ರ ಅಭಿವೃದ್ಧಿ ಕಾಣಲು ಹೇಗೆ ಸಾಧ್ಯ ಎಂದು ಅಧಿಕಾರಿಗಳನ್ನು ಶಾಸಕರು ಪ್ರಶ್ನಿಸಿದರು.

ಇನ್ನಾದರೂ ಕ್ಷೇತ್ರದ ಅನೇಕ ಗ್ರಾಮಗಳಲ್ಲಿ ಕಾಮಗಾರಿಗಳು ನಡೆಯುವ ಸಂದರ್ಭದಲ್ಲಿ ಅಧಿಕಾರಿಗಳು ಪದೇಪದೇ ಭೇಟಿ ನೀಡಬೇಕು. ಪ್ರತಿ ಇಲಾಖೆಯ ತಾಲೂಕಿನ ಅಧಿಕಾರಿಗಳು ಎಚ್ಚೆತ್ತು ಕೊಂಡು ಪರಿಶೀಲಿಸಬೇಕು ಹಾಗೂ ಕ್ಷೇತ್ರದಲ್ಲಿ ನಡೆಯುವ ರಸ್ತೆ, ಕಟ್ಟಡ ಕಾಮಗಾರಿಗಳು ನಡೆಯುತ್ತಿವೆ ಎಂಬ ಬಗ್ಗೆ ಪರಿಶೀಲಿಸಿ ಗುತ್ತಿಗೆದಾರರಿಂದ ಗುಣಮಟ್ಟದ ನಿಗದಿ ಪಡಿಸಿದ ಅವಧಿಯಲ್ಲಿ ಕಾಮಗಾರಿಗಳು ಮುಗಿಯಬೇಕು. ಒಂದು ವೇಳೆ ಗುಣಮಟ್ಟದ ಕಾಮಗಾರಿ ಹಾಗೂ ನಿಗದಿಪಡಿಸಿದ ಅವಧಿ ಒಳಗೆ ಆಗದೆ ಇದ್ದರೆ ಅಧಿಕಾರಿಗಳನ್ನೇ ಹೊಣೆ ಗಾರರನ್ನಾಗಿ ಮಾಡಲಾಗುವುದು ಎಂದು ಅವರು



ಸರ್ಕಾರದಿಂದ ಬಂದಿರುವ ಯೋಜನೆ ಗಳು ಫಲಾನುಭವಿಗಳಿಗೆ ಅನುಷ್ಠಾನಗೊಳ್ಳುತ್ತಿದೆ ಎಂದು ಎಚ್ಚರಿಸಿದರು. ಈ ಸಂದರ್ಭದಲ್ಲಿ ಶಾಸಕರ ಬೆಂಬಲಿಗರು ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

# ಕುರೇಕುಪ್ಪ ಪುರಸಭೆ: ಆಕ್ಷೇಪಣೆಗಳಿಗೆ ಆಹ್ವಾನ

**ಬಳ್ಳಾರಿ,ಅ.8:** ಕುರೇಕುಪ್ಪ ಪುರಸಭೆ ವ್ಯಾಪ್ತಿಯಲ್ಲಿ ಶಾಲೆ ಬಿಟ್ಟ ಮಕ್ಕಳ ಮನೆ ಸಮೀಕ್ಷೆ (ಓಎಸ್‌ಎಸ್ ಸರ್ವೇ) ಕಾರ್ಯ ಪೂರ್ಣಗೊಳಿಸಿದ್ದು, ವಿವರಗಳಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ ಸಾರ್ವಜನಿಕರು ಸಲ್ಲಿಸಬಹುದು ಎಂದು ಕುರೇಕುಪ್ಪ ಪುರಸಭೆಯ ಮುಖ್ಯಾಧಿಕಾರಿಯವರು ತಿಳಿಸಿದ್ದಾರೆ.

ಸಮೀಕ್ಷೆಯಲ್ಲಿ ಶಾಲೆ ಬಿಟ್ಟ ಮಕ್ಕಳ ಕ್ರೂಢೀಕೃತ ಮಾಹಿತಿ/ವಿವರಗಳನ್ನು ಸೆಂಟರ್ ಫಾರ್ ಇ-ಗವರ್ನೆನ್ಸ್ ಇಲಾಖೆಯ ವೆಬ್‌ಸೈಟ್ ಹಾಗೂ ಕಚೇರಿ ಸೂಚನಾ ಫಲಕದಲ್ಲಿ ಪ್ರಚುರಪಡಿಸಲಾಗಿದೆ. ಸಮೀಕ್ಷೆಯಲ್ಲಿ ಬಿಟ್ಟು ಹೋದ ವಿವರಗಳಿದ್ದಲ್ಲಿ ಅಥವಾ ಸಮೀಕ್ಷೆಯ ವಿವರದ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಪ್ರಕಟಣೆಗೊಂಡ ದಿನದಿಂದ 15 ದಿನಗಳೊಳಗಾಗಿ ಪುರಸಭೆ ಕಚೇರಿಗೆ ವಿವರಗಳೊಂದಿಗೆ ಲಿಖಿತವಾಗಿ ಸಲ್ಲಿಸಬಹುದು.

ನಿಗಧಿತ ದಿನಾಂಕದ ನಂತರ ಬಂದಂತಹ ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಲಬುರ್ಗಿ ಜಿಲ್ಲಾ ಪಂಚಾಯಿತಿ ಕಚೇರಿ ಮುಂದೆ ಅಭಿವೃದ್ಧಿ ಅಧಿಕಾರಿಗಳ ಪ್ರತಿಭಟನೆ



**ಕಲಬುರ್ಗಿ, ಅ.8–** ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಯನ್ನು ಉನ್ನತೀಕರಣಗೊಳಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು 11 ವೃಂಧ ನೌಕರರು ಸೋಮವಾರ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಚೇರಿ ಮುಂದೆ ಬೃಹತ್ ಪ್ರತಿಭಟನೆ ಮಾಡಿದರು.

ಪಂಚಾಯಿತಿರಾಜ್ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ಹಣಮಂತರಾವ್ ಗುಡಿ, ರಾಜೇಶ್ವರಿ ಸಾಹು ಅವರೂ ಸೇರಿದಂತೆ ಅನೇಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಕಳೆದ ನಾಲ್ಕು ಮತ್ತು ಐದರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಮಾಡಿದಾಗ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿರಾಜ್, ಐಟಿಬಿಟಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಸ್ಥಳದಲ್ಲಿ ಇರದೇ ಇರುವುದರಿಂದ ಭೇಟಿ ಮಾಡದೇ ಇರುವುದರಿಂದ ಹೋರಾಟವನ್ನು ಮುಂದುವರೆಸಿಕೊಂಡು ಹೋಗಲು ರಾಜ್ಯದ ಎಲ್ಲ ಜಿಲ್ಲಾಪಂಚಾಯಿತಿ ಕೇಂದ್ರದಲ್ಲಿ ಪ್ರತಿಭಟನೆ ಮಾಡಲು ಸೂಚಿಸಿದ್ದರಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದ ಎಂದು ಮುಖಂಡರು ಹೇಳಿದರು.

ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕರವಸೂಲಿಗಾರ, ಕ್ಲರ್ಕ್, ಡಾಟಾ ಎಂಟ್ರಿ, ಆಪರೇಟರ್ಸ್, ನೀರುಗಂಟಿಗಳು, ಜವಾನ್, ಸ್ವಚ್ಛತಾಗಾರರಿಗೆ ಏಕಕಾಲಕ್ಕೆ ಸರ್ಕಾರಿ ನೌಕರರನ್ನಾಗಿ ಘೋಷಿಸುವಂತೆ, ದಿನನಿತ್ಯ ಬಳಸುವ ವಸ್ತುಗಳ ಬೆಲೆ ಏರಿಕೆಗೆ ಅನುಗುಣವಾಗಿ ಕನಿಷ್ಠ ವೇತನ 31000ರೂ.ಗಳನ್ನು ನಿಗದಿಗೊಳಿಸುವಂತೆ, ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯ ನಿರ್ವಹಿಸುವ ನೌಕರರಿಗೆ ನಿವೃತ್ತಿ ಅಥವಾ ಮರಣ ಹೊಂದಿದರೆ ಅವರಿಗೆ ಪ್ರತಿ ತಿಂಗಳು ಕನಿಷ್ಠ 6000ರೂ.ಗಳ ಪಿಂಚಣಿ ವ್ಯವಸ್ಥೆ ಜಾರಿಗೊಳಿಸುವಂತೆ ಅವರು ಒತ್ತಾಯಿಸಿದರು.

ಗ್ರಾಮ ಪಂಚಾಯಿತಿಗಳಿಗೆ ಎರಡನೇ ಡಾಟಾ ಎಂಟ್ರಿ ಆಪರೇಟರ್ಸ್ ಹುದ್ದೆಗೆ ಅವಕಾಶ ನೀಡಿದ್ದು ಸ್ವಾಗತಾರ್ಹ. ಆದರೆ ಈಗಾಗಲೇ ಗ್ರಾಮ ಪಂಚಾಯಿತಿಗಳಲ್ಲಿ ಹೆಚ್ಚುವರಿಯಾಗಿ ಕಾರ್ಯನಿರ್ವಹಿಸುವ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಕ ಮಾಡಿಕೊಂಡು ಮುಂದು ವರೆಸುವಂತೆ ಆಗ್ರಹಿಸಿದ ಅವರು, ಅಲ್ಲದೇ ಈಗಾಗಲೇ ಗ್ರಾಮ ಪಂಚಾಯಿತಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ವಾಟರ್‌ಮೆನ್, ಜವಾನ್, ಸ್ವೀಪರ್ ಗಳಲ್ಲಿ ಕಂಪ್ಯೂಟರ್ ಜ್ಞಾನ ಹಾಗೂ ವಿದ್ಯಾರ್ಹತೆ ಹೊಂದಿದವರಿಗೆ ಅವಕಾಶ ನೀಡಬೇಕು ಎಂದು ಒತ್ತಾಯಿಸಿದರು.

ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುವ ನೌಕರರಿಗೆ ವರ್ಗಾವಣೆಗೆ ಅವಕಾಶ ಕೊಡುವಂತೆ, ನೀರುಗಂಟಿಗಳಿಗೆ ಮಲ್ಟಿಪರ್ಪಸ್ ಎಂದಿರುವುದನ್ನು ಕೈಬಿಟ್ಟು ನಿರ್ದಿಷ್ಟವಾದ (ಜಾಬ್ ಕಾರ್ಡ್) ಕೆಲಸಗಳನ್ನು ನಿಗದಿಪಡಿಸುವಂತೆ, ಆದಾಯಕ್ಕೆ ಅನುಗುಣವಾಗಿ ಕರ ವಸೂಲಿಗಾರರ ಹುದ್ದೆಗಳನ್ನು ನಿಗದಿಗೊಳಿಸುವಂತೆ, ಪ್ರತಿಯೊಂದು ಗ್ರಾಮ ಪಂಚಾಯಿತಿಗಳಿಗೆ ಲೆಕ್ಕ ಸಹಾಯಕ ಹುದ್ದೆ ಸೃಷ್ಟಿಸುವಂತೆ ಅವರು ಆಗ್ರಹಿಸಿದರು.

ಗ್ರೇಡ್ ಒನ್ ಕಾರ್ಯದರ್ಶಿ ಹುದ್ದೆಗಳಿಗೆ ಶೇಕಡಾ 100ರಷ್ಟು ಸ್ಥಾನಗಳನ್ನು ಗ್ರೇಡ್–2 ಕಾರ್ಯದರ್ಶಿಗಳಿಗೆ ಶೇಕಡಾ 50ರಷ್ಟು ದ್ವಿತೀಯ ದರ್ಜೆ ಲೆಕ್ಕ ಸಹಾಯಕ ಹುದ್ದೆಗೆ ಶೇಕಡಾ 50ರಷ್ಟು ಸ್ಥಾನಗಳನ್ನು ಬಡ್ತಿ ನೀಡುವಂತೆ, ಅನ್ಯ ಇಲಾಖೆಗೆ ಬಡ್ತಿ ನೀಡದಿರುವಂತೆ, ಗ್ರೇಡ್–1 ಪಂಚಾಯಿತಿಗಳನ್ನು ಜನಸಂಖ್ಯೆಗೆ ಆಧರಿಸಿ ಗ್ರಾಮ ಪಂಚಾಯಿತಿಗಳನ್ನು ಮೇಲ್ದರ್ಜೆಗೇರಿಸುವಂತೆ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಗೆ ಶೇಕಡಾ 60ರಷ್ಟು ಸ್ಥಾನವನ್ನು ಗ್ರೇಡ್–1 ಕಾರ್ಯದರ್ಶಿಗಳಿಗೆ ನೀಡುವಂತೆ, ಐಪಿಡಿ ಸಾಲಪ್ಪ ವರದಿಯಂತೆ ಸ್ವಚ್ಛತಾಗಾರರನ್ನು ನೇಮಿಸುವಂತೆ ಅವರು ಒತ್ತಾಯಿಸಿದರು.

ಸೇವಾ ಹಿರಿತನ ಪರಿಗಣಿಸಿ ವೇತನ ಹೆಚ್ಚಿಸುವಂತೆ, ತೀವ್ರವಾದ ಅನಾರೋಗ್ಯಕ್ಕೆ ತುತ್ತಾದ ನೌಕರರಿಗೆ ಆಸ್ಪತ್ರೆ ವೆಚ್ಚ ಭರಿಸುವಂತೆ, ಗ್ರೇಡ್–1 ಕಾರ್ಯದರ್ಶಿಗಳಿಂದ ಪಿಡಿಓ ಹುದ್ದೆಗೆ ರಾಜ್ಯ ಮಟ್ಟದಲ್ಲಿ ಕೊಡಮಾಡುವ ಮುಂಬಡ್ತಿಯನ್ನು ಕೈಬಿಟ್ಟು ಜಿಲ್ಲಾ ಮಟ್ಟದಲ್ಲಿ ಮುಂಬಡ್ತಿಗೆ ಅವಕಾಶ ಕೊಡುವಂತೆ, ಬಿಲ್ ಕಲೆಕ್ಟರ್ ಮತ್ತು ಗುಮಾಸ್ತ ವೃಂದದಿಂದ ಗ್ರೇಡ್–2 ಕಾರ್ಯದರ್ಶಿ ಮತ್ತು ಲೆಕ್ಕ ಸಹಾಯಕ ಹುದ್ದೆ ಗಳಿಗೆ ನೇಮಕಗೊಂಡ ನೌಕರರಿಗೆ ಕೆಸಿಎಸ್‌ಆರ್ 325 ನಿಯಮಾನುಸಾರ ಹಿಂದಿನ ಸೇವೆಯನ್ನು ಪರಿಗಣಿಸಿ ಹಳೆ ಪಿಂಚಣಿ ಯೋಜನೆ ಜಾರಿಗೊಳಿಸುವಂತೆ ಅವರು ಆಗ್ರಹಿಸಿದರು.

ಗ್ರಾಮ ಪಂಚಾಯಿತಿ ಸಿಬ್ಬಂದಿ ಗಳಿಗೆ ಇ– ಹಾಜರಾತಿ ಲೋಪ ದೋಷ ಗಳನ್ನು ಪಂಚಾಯಿತಿ ತಂತ್ರಾಂಶದಲ್ಲಿ ಸರಿಪಡಿಸುವ ಕುರಿತು ಸಿಬ್ಬಂದಿಗಳಿಗೆ ಪೂರ್ಣ ವೇತನ ಪಾವತಿಸುವಂತೆ, ರಾಜ್ಯದಲ್ಲಿ ಮೊದಲನೇ ಡಾಟಾ ಎಂಟ್ರಿ ಆಪರೇಟರುಗಳಿಗೆ ಕ್ಲರ್ಕ್ ಹುದ್ದೆ ತೆರವಾದ ನಂತರ ಅನುಮೋದನೆ ನೀಡಬೇಕೆಂಬ ಶರತ್ತನ್ನು ಕೈಬಿಟ್ಟು ಅನುಮೋದನೆ ನೀಡಲು ಅವಕಾಶ ಕೊಡುವಂತೆ, ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಎಲ್ಲ ವಿಭಾಗದ ಹುದ್ದೆಗಳನ್ನು ತುಂಬುವಂತೆ, ಸಂಖ್ಯೆ: ಕೆಸಿಆರ್‌ಸಿ–ಜಿಪಿ ಎ– 134/2024 2024ರ ಜೂನ್ 26ರ ಆದೇಶವನ್ನು ಹಿಂಪಡೆಯುವಂತೆ ಅವರು ಒತ್ತಾಯಿಸಿದರು.

11 ವೃಂದದವರ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿದ ಅವರು, ಗ್ರಾಮೀಣಾಭಿವೃದ್ಧಿ ಸಚಿವರು ಜಿಲ್ಲೆಯವರು ಆಗಿರುವುದರಿಂದ ಬೇಡಿಕೆಗಳಿಗೆ ಸ್ಪಂದಿಸುವರು ಎಂಬ ವಿಶ್ವಾಸ ಇದೆ. ಬರುವ ಅಕ್ಟೋಬರ್ 10ರಂದು ಸಭೆ ಕರೆಯಲಾಗಿದ್ದು, ಅಲ್ಲಿಯಾದರೂ ಬೇಡಿಕೆಗಳಿಗೆ ಸ್ಪಂದಿಸಬೇಕು ಎಂದು ಒತ್ತಾಯಿಸಿದರು.

# ಈಜು ಸ್ಪರ್ಧೆಯಲ್ಲಿ ರಜನಿ ಲಕ್ಕಗೆ 6 ಚಿನ್ನ, 1 ಬೆಳ್ಳಿ ಪದಕ



**ಬಳ್ಳಾರಿ, ಅ.8–** 25ನೇ ರಾಜ್ಯಮಟ್ಟದ ಮಾಸ್ಟರ್ಸ್ ಸ್ವಿಮ್ಮಿಂಗ್ ಚಾಂಪಿಯನ್ ಶಿಪ್–2024 ವತಿಯಿಂದ ಅ.05 ಮತ್ತು 06 ರಂದು ಬೆಂಗಳೂರಿನಲ್ಲಿ ನಡೆದ ಈಜು ಸ್ಪರ್ಧೆಯಲ್ಲಿ ರಜನಿ ಲಕ್ಕ ಅವರು ಆರು ಚಿನ್ನ, ಒಂದು ಬೆಳ್ಳಿ ಪದಕ ಸೇರಿ 7 ಪದಕಗಳನ್ನು ಗೆದ್ದು ಮುಡಿಗೇರಿಸಿಕೊಂಡಿದ್ದಾರೆ.

ರಾಜ್ಯಮಟ್ಟದ ಮಾಸ್ಟರ್ಸ್ ಸ್ವಿಮ್ಮಿಂಗ್ ಚಾಂಪಿಯನ್ ಶಿಪ್–2024 ವತಿಯಿಂದ ಆಯೋಜಿಸಿದ್ದ ವಿವಿಧ ಈಜು ಸ್ಪರ್ಧೆಗಳಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಸ್ಪರ್ಧಾಳುಗಳು ಭಾಗವಹಿಸಿದ್ದರು. ಜಿಲ್ಲೆಯನ್ನು ಪ್ರತಿನಿಧಿಸಿ ರಜನಿ ಲಕ್ಕ ಅವರು ಆಯ್ಕೆಯಾಗಿದ್ದರು.

ಅವರು, ಈಜು ಸ್ಪರ್ಧೆಯಲ್ಲಿ 100 ಮೀ. ಬ್ಯಾಕ್ ಸ್ಟ್ರೋಕ್, 200 ಮೀ. ಐಎಂ, 50 ಮೀ. ಫ್ರೀಸ್ಟೈಲ್, 50 ಮೀ. ಬಟ್ಟರ್‌ಫ್ಲೈ, 4★50 ಫ್ರೀ ರಿಲೇ ವಿಭಾಗಗಳಲ್ಲಿ ಭಾಗವಹಿಸಿ, ಪ್ರಥಮ ಸ್ಥಾನ ಪಡೆದುಕೊಂಡು 6 ಚಿನ್ನ, 1 ಬೆಳ್ಳಿ ಪದಕ ಹಾಗೂ ಪ್ರಶಸ್ತಿ ಪ್ರಮಾಣ ಪತ್ರ, ತಮ್ಮದಾಗಿಸಿಕೊಂಡಿದ್ದಾರೆ.

ರಜನಿ ಲಕ್ಕ ಅವರು, ರಾಜ್ಯ ಮಟ್ಟದ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ 100 ಕ್ಕೂ ಹೆಚ್ಚು ಪದಕಗಳನ್ನು ಹೊಂದಿದ್ದಾರೆ. ನವೆಂಬರ್ 10 ರಿಂದ 12 ರ ವರೆಗೆ ಭೂಪಾಲ್‌ನಲ್ಲಿ ನಡೆಯುವ ರಾಷ್ಟ್ರಮಟ್ಟದ ಮಾಸ್ಟರ್ಸ್ ಸ್ವಿಮ್ಮಿಂಗ್ ಚಾಂಪಿಯನ್‌ಶಿಪ್–2024 ಗೆ ಆಯ್ಕೆಯಾಗಿದ್ದು, ಅಲ್ಲಿ ನಡೆಯುವ ಈಜು ಸ್ಪರ್ಧೆಗಳಲ್ಲಿ ಭಾಗವಹಿಸುವರು.

ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭರಾಣಿ. ವಿ.ಜೆ., ಜಿಪಂ ಸಿಇಒ ರಾಹುಲ್ ಶರಣಪ್ಪ ಸಂಕನೂರ, ಎಡಿಸಿ ಮಹಮ್ಮದ್ ಝುಬೇರ್, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಕೆ.ಗ್ರೇಸಿ ಅವರು ಅಭಿನಂದಿಸಿದ್ದಾರೆ.

# ಸಾವಳಗಿ (ಬಿ) ಗ್ರಾಮದಲ್ಲಿ ''ಉದ್ಯೋಗ ಖಾತ್ರಿ ನಡಿಗೆ ಸಬಲತೆಯಡೆಗೆ'' ಅಭಿಯಾನಕ್ಕೆ ಚಾಲನೆ




**ಕಲಬುರಗಿ, ಅ.08–** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ'' ಕಲಬುರಗಿ ತಾಲೂಕಿನ ಸಾವಳಗಿ (ಬಿ) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಸಾವಳಗಿ (ಬಿ) ಗ್ರಾಮದಲ್ಲಿ ಸೋಮವಾರ ''ಉದ್ಯೋಗ ಖಾತ್ರಿ, ನಡಿಗೆ ಸಬಲತೆಯಡೆಗೆ'' ಅಭಿಯಾನವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಕಲಬುರಗಿ ನರೇಗಾ ತಾಲೂಕು ಪಂಚಾಯತ್ ಐಇಸಿ ಸಂಯೋಜಕ ಮೋಸಿನ ಖಾನ್ ಅವರು ಮಾತನಾಡಿ, ಮನೆಮನೆಗಳಿಗೆ ಭೇಟಿ ನೀಡಿ ಉದ್ಯೋಗ ಖಾತ್ರಿ ಯೋಜನೆಯಡಿ ವೈಯಕ್ತಿಕ ಮತ್ತು ಸಮುದಾಯ ಕಾಮಗಾರಿಗಳ ಕುರಿತು ಜನರಿಗೆ ಮಾಹಿತಿ ನೀಡಿದರು. ಅಕ್ಟೋಬರ್ 2 ರಿಂದ ಒಂದು ತಿಂಗಳ ಕಾಲ ಎಲ್ಲಾ ಗ್ರಾಮ ಪಂಚಾಯತಿ ಮಟ್ಟದಲ್ಲಿ'' ಉದ್ಯೋಗ ಖಾತ್ರಿ ನಡಿಗೆ ಸಬಲತೆಯಡೆಗೆ'' ಅಭಿಯಾನವನ್ನು ಯಶಸ್ವಿಗೊಳಿಸಬೇಕೆಂದರು ತಿಳಿಸಿದರು. ಕ್ರಾರ್ಯಕ್ರಮದಲ್ಲಿ ಸಾವಳಗಿ (ಬಿ) ಗ್ರಾಮ ಪಂಚಾಯತಿಯ ಬಿಲ್ ಕಲೆಕ್ಟರ್ ಸಾಯಬಣ್ಣ, ಸಿಬ್ಬಂದಿ ವರ್ಗ ಮತ್ತು ತಾಂತ್ರಿಕ ಸಹಾಯಕರು, ಗ್ರಾಮ ಕಾಯಕ ಮಿತ್ರ ಕಲಾವತಿ, ಹಾಗೂ ನರೇಗಾ ಕೂಲಿ ಕಾರ್ಮಿಕರು ಹಾಗೂ ಗ್ರಾಮಸ್ಥರು, ಎಲ್ಲರೂ ಸ್ಥಳದಲ್ಲಿ ಹಾಜರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

Owned, Printed and published by **ANIL KUMAR H** from Plot No. #3-5-415/1-A MANVI POOJA RICE MILL, KONAPUR PET MANVI- 584123 Printed at **MAA FRIENDS Printing Press,** Plot No. #3-5-415/1-A MANVI POOJA RICE MILL, KONAPUR PET MANVI- 584123 DIST: Raichur State: Karnataka Editor: **ANIL KUMAR H**